# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮೇ 04, 2022

ಸಂಪುಟ : 48 ಸಂಚಿಕೆ : 353 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





**ಬಸವ ಜಯಂತಿ-ರಂಜಾನ್**

ಬಸವ ಜಯಂತಿ ಅಂಗವಾಗಿ ವಿರಕ್ತಮಠದಲ್ಲಿ ಶ್ರೀ ಗುರು ಬಸವೇಶ್ವರರ ತೊಟ್ಟಿಲು ಕಾರ್ಯಕ್ರಮ ನಡೆಯಿತು. ಶ್ರೀ ಬಸವಪ್ರಭು ಸ್ವಾಮೀಜಿ ಅವರು ಮಕ್ಕಳಿಗೆ ಶಿವಶರಣರ ಹೆಸರು ನಾಮಕರಣ ಮಾಡಿದರು. ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ಮುಸ್ಲಿಂ ಬಾಂಧವರು ಪಿ.ಬಿ. ರಸ್ತೆ ಹಳೇ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. (ಬಲಚಿತ್ರ)

## ನಗರಾದ್ಯಂತ ಸಡಗರ ಸಂಭ್ರಮದ ರಂಜಾನ್

ದಾವಣಗೆರೆ, ಮೇ 3 - ಒಂದು ತಿಂಗಳು ಉಪವಾಸ (ರೋಜಾ) ಆಚರಿಸಿ, ಚಂದ್ರ ದರ್ಶನದ ಮೂಲಕ ರಂಜಾನ್ ಹಬ್ಬವನ್ನು ಸಮಸ್ತ ಮುಸ್ಲಿಂ ಬಾಂಧವರು ನಗರಾದ್ಯಂತ ಇಂದು ಸಡಗರ, ಸಂಭ್ರಮದಿದ ಆಚರಿಸಿದರು.

ಹಬ್ಬದ ಪ್ರಾರ್ಥನೆಯಾದ ಈದ್-ಉಲ್-ಫಿತರ್ ನಮಾಜ್ ಬೆಳಿಗ್ಗೆ 10.30ಕ್ಕೆ ಸರಿಯಾಗಿ ಪಿ.ಬಿ. ರಸ್ತೆ ಹಳೇ ಈದ್ಗಾ, ರಜಾ ಉಲ್ ಮುಸ್ತಾಫ್ ನಗರದಲ್ಲಿರುವ ಖುದೂಸಿಯಾ ಈದ್ಗಾ ಹಾಗೂ ಎಸ್.ಓ.ಜಿ ಕಾಲೋನಿಯಲ್ಲಿರುವ ಈದ್ಗಾದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.


ತಮ್ಮ ಜೀವನದ ಫಿತ್ರಾ ಆಸ್ತಿಯ ಆದಾಯದಲ್ಲಿ ಸ್ವಲ್ಪ ಭಾಗವನ್ನು ಜಕಾತ್ ರೂಪದಲ್ಲಿ ಬಡವರಿಗೆ, ನಿರ್ಗತಿಕರಿಗೆ ವಿತರಿಸುವ ಮೂಲಕ ಸರ್ವರೂ ಸಹ ಹಬ್ಬದ ಸಂತೋಷವನ್ನು ಆಚರಿಸಲಿ ಎಂಬ ಮೂಲ ಸಂದೇಶವಾಗಿರುವ ರಂಜಾನ್ ಹಬ್ಬವು ದೇಶಾದ್ಯಂತ ಒಂದೇ ದಿನ ಸಂಭ್ರಮದಿಂದ ಆಚರಿಸಲಾಯಿತು.

ಹೊಸ ಬಟ್ಟೆಗಳನ್ನು ಧರಿಸಿಕೊಂಡು ತಮ್ಮ ತಮ್ಮ ಮಕ್ಕಳೊಂದಿಗೆ ಈದ್ಗಾ ದತ್ತ ಹೆಜ್ಜೆ ಹಾಕತೊಡಗಿದ ಮುಸ್ಲಿಂ ಬಾಂಧವರು ತಂಡೋಪ ತಂಡವಾಗಿ ಅಲ್ಲಾಹು ಅಕ್ಬರ್, ಅಲ್ಲಾ ಹು ಅಕ್ಬರ್ ಎಂಬ ಘೋಷ ವಾಕ್ಯಗಳನ್ನು ಪಠಿಸುತ್ತಾ ಸಾಗುತ್ತಿದ್ದ ದೃಶ್ಯ ನಗರದ ವಿವಿಧ ಪ್ರದೇಶಗಳಲ್ಲಿ ಕಂಡು ಬಂದಿತ್ತು.

ಕಳೆದ ಎರಡು ವರ್ಷಗಳಿಂದ ಕೊರೊನಾ ಕರಿ ನೆರಳಿನ ಭೀತಿಯಲ್ಲಿ ತಮ್ಮ ಮನೆಯಂಗಳಕ್ಕೆ ಸೀಮಿತವಾಗಿದ್ದ ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯಿಂದ ವಂಚಿತರಾಗಿದ್ದ ಮುಸ್ಲಿಂ ಬಾಂಧವರು ಈ ಬಾರಿ ಸಡಗರ ಸಂಭ್ರಮದೊಂದಿಗೆ ಪ್ರಾರ್ಥನೆಯನ್ನು ಸಲ್ಲಿಸುವ ಮೂಲಕ ಒಬ್ಬರಿಗೊಬ್ಬರು ಆಲಂಗಿಸಿ ಹಸ್ತ ಲಾಘವ ಮಾಡಿ ಸಂತೋಷವನ್ನು ವಿನಿಮಯ (3ನೇ ಪುಟಕ್ಕೆ)

# ದೇಶವನ್ನು ಸಶಕ್ತವಾಗಿ ಕಟ್ಟಿ, ಯುವಕರಿಗೆ ಅವಕಾಶ: ಷಾ

ಬೆಂಗಳೂರು, ಮೇ 3 - ಭಾರತವನ್ನು ಸಶಕ್ತವಾಗಿ ಕಟ್ಟಿ, ಜಾಗತಿಕ ಮಟ್ಟದಲ್ಲಿ ಪ್ರತಿಷ್ಠಾಪಿಸುವುದು ಮತ್ತು ಯುವ ಜನರಿಗೆ ಉಜ್ವಲ ಅವಕಾಶಗಳನ್ನು ಒದಗಿಸಬೇಕೆನ್ನುವುದೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಂಕಲ್ಪವಾಗಿದೆ ಎಂದಿರುವ ಗೃಹ ಸಚಿವ ಅಮಿತ್ ಷಾ ಕ್ರಾಂತಿಕಾರಕ ಬದಲಾವಣೆಗಳನ್ನು ತರಲೆಂದೇ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಗಿದ್ದು, ಭಾರತವನ್ನು ಜ್ಞಾನಾಧಾರಿತ 'ಸೂಪರ್ ಪವರ್' ಮಾಡಲಾಗುವುದು ಎಂದರು.



ಕೇಂದ್ರ ಸರ್ಕಾರದ ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನದಡಿ ಇಲ್ಲಿ ಸ್ಥಾಪಿಸಲಾಗಿರುವ ನೃಪತುಂಗ ಏಕೀಕೃತ ವಿಶ್ವವಿದ್ಯಾಲಯವನ್ನು ಇಂದು ಅಧಿಕೃತವಾಗಿ ಉದ್ಘಾಟಿಸಿ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಅವರು ನೂತನ ವಿ.ವಿ. ಶೈಕ್ಷಣಿಕ ಸಮುಚ್ಚಯ ನಿರ್ಮಾಣಕ್ಕೆ ಶಂಕುಸ್ಥಾಪನೆ, ಲಾಂಛನ ಅನಾವರಣ ಮತ್ತು ಬಳ್ಳಾರಿಯಲ್ಲಿ ಸ್ಥಾಪಿಸಲಾಗಿರುವ ವಿಧಿವಿಜ್ಞಾನ ಪ್ರಯೋಗಾಲಯದ ವರ್ಚುಯಲ್ ಉದ್ಘಾಟನೆಯನ್ನೂ ನೆರವೇರಿಸಿದರು.

ದೇಶದಲ್ಲಿ ಸಂಭವಿಸುತ್ತಿರುವ ಶೈಕ್ಷಣಿಕ ಕ್ರಾಂತಿಯಲ್ಲಿ ಭಾರತೀಯ ಪ್ರಾದೇಶಿಕ ಭಾಷೆಗಳಿಗೆ ಮಹತ್ವದ ಸ್ಥಾನವಿದೆ. ಎನ್‌ಇಪಿಯನ್ನು ಕರ್ನಾಟಕವು ದೇಶದ ಮೊದಲ ರಾಜ್ಯವಾಗಿ ಜಾರಿಗೆ ತರುವ ಹೊಣೆಯನ್ನು ಸ್ವೀಕರಿಸಿರುವುದು ಶ್ಲಾಘನೀಯ ನಡೆಯಾಗಿದೆ ಎಂದವರು ಹೇಳಿದರು. ವಿದ್ಯಾರ್ಥಿಗಳೇ ದೇಶದ ಭವಿಷ್ಯವಾಗಿದ್ದು, ಅವರಲ್ಲಿ ದೇಶಭಕ್ತಿಯ ಸಂಸ್ಕಾರವನ್ನು ಬೆಳೆಸಬೇಕಾಗಿದೆ. ಸ್ವಾತಂತ್ರ್ಯದ ಅಮೃತ (2ನೇ ಪುಟಕ್ಕೆ)

## ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ

### ಆಡಳಿತದ ಬಗ್ಗೆ ಗಮನ ಕೇಂದ್ರೀಕರಿಸಲು ಮುಖ್ಯಮಂತ್ರಿಗೆ ಅಮಿತ್ ಷಾ ಸೂಚನೆ

ಬೆಂಗಳೂರು, ಮೇ 3 – ನಾಯಕತ್ವ ಬದಲಾವಣೆಯ ಊಹಾಪೋಹದ ಬಗ್ಗೆ ತಲೆ ಕೆಡಿಸಿಕೊಳ್ಳದೆ ಉತ್ತಮ ಆಡಳಿತ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ತಿಳಿಸಿದ್ದಾರೆ.


ಮುಂದಿನ ವಿಧಾನಸಭಾ ಚುನಾವಣೆಯನ್ನು ನಿಮ್ಮ ನೇತೃತ್ವದಲ್ಲೇ ಎದುರಿಸಲಾಗುವುದು. ರಾಜ್ಯದಲ್ಲಿ ನಾಯಕತ್ವದ ಬದಲಾವಣೆಯ ಪ್ರಶ್ನೆಯೇ ಇಲ್ಲ ಎಂದು ಅಮಿತ್ ಷಾ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.


ನಾಯಕತ್ವ ಬದಲಾವಣೆ ಆಗದು ಎಂದು ಅಮಿತ್ ಷಾ ಸ್ಪಷ್ಟ ನಿರ್ದೇಶನ ನೀಡಿದ್ದಾರೆ. ಅಭಿವೃದ್ಧಿ ಬಗ್ಗೆ ಗಮನ ಕೇಂದ್ರೀಕರಿಸಿ. ಮುಂದಿನ ಚುನಾವಣೆಯನ್ನು ಅಭಿವೃದ್ಧಿ ಆಧಾರದ ಮೇಲೆ ಎದುರಿಸಿ ಯಶಸ್ಸು (3ನೇ ಪುಟಕ್ಕೆ)

## ಬಸವ ಜಯಂತಿ ಸಂಭ್ರಮ

### ಬಸವೇಶ್ವರ ದೇವಾಲಯಗಳಲ್ಲಿ ವಿಶೇಷ ಪೂಜೆ

ದಾವಣಗೆರೆ, ಮೇ 3- ವಿಶ್ವಗುರು ಬಸವಣ್ಣನವರ ಜಯಂತಿಯನ್ನು ನಗರದಲ್ಲಿ ಉತ್ಸವವಾಗಿ ಸಂಭ್ರಮದಿಂದ ಆಚರಿಸಲಾಯಿತು. ನಗರದ ಬಸವೇಶ್ವರ ದೇವಾಲಯಗಳಲ್ಲಿ ಬಸವ ಜಯಂತಿ ಪ್ರಯುಕ್ತ ಹೊರ ಹಾಗೂ ಒಳ ಆವರಣವು ವಿಶೇಷ ಪುಷ್ಪಾಲಂಕಾರದಿಂದ ಕಂಗೊಳಿಸುತ್ತಿದ್ದವು. ವಿಶೇಷ ಪೂಜೆಗಳು ನಡೆದವು. ಬಸವಣ್ಣನ ಭಕ್ತ ಸಮೂಹ ಬಸವೇಶ್ವರರನ್ನು ಆರಾಧಿಸಿದರು.





ದಾವಣಗೆರೆ ಕಾಯಿಪೇಟೆ ಹಾಗೂ ಬಸವೇಶ್ವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆಯಿತು.

ನಗರದ ಕಾಯಿಪೇಟೆ, ದೊಡ್ಡ ಪೇಟೆ ಮತ್ತು ಬಸವರಾಜ ಪೇಟೆಯಲ್ಲಿರುವ ಬಸವೇಶ್ವರ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ಬೆಳಗ್ಗೆಯಿಂದಲೇ ಬಸವೇಶ್ವರ ದೇವಾಲಯಗಳಿಗೆ ಭಕ್ತರು ಕುಟುಂಬ ಸಮೇತರಾಗಿ ತೆರಳಿ ಪೂಜೆ ಸಲ್ಲಿಸಿದರು. ಕೆಲ ಭಕ್ತರು ಸಿಹಿ ಸವಿಯೂಟವನ್ನು ಬಸವೇಶ್ವರ ದೇವರಿಗೆ ನೈವೇದ್ಯ ಸಮರ್ಪಿಸಿದರು. ಕಾಯಿಪೇಟೆ, ದೊಡ್ಡಪೇಟೆ ಮತ್ತು ಬಸವರಾಜ ಪೇಟೆಯಲ್ಲಿನ ಬಸವೇಶ್ವರ ದೇವಾಲಯಗಳಲ್ಲಿ ಜನರ ಸಂಖ್ಯೆ ಹೆಚ್ಚಾಗಿತ್ತು. ಕಾಯಿಪೇಟೆಯ ಬಸವೇಶ್ವರದ ದೇವಾಲಯದಲ್ಲಿ (2ನೇ ಪುಟಕ್ಕೆ)

## ಎಸ್ಸೆಸ್‌ರಿಂದ ಎತ್ತುಗಳಿಗೆ ಪೂಜೆ



ದಾವಣಗೆರೆ, ಮೇ 3- ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಮಾಜಿ ಸಚಿವರು, ಹಾಲಿ ಶಾಸಕರಾದ ಡಾ.ಶಾಮನೂರು ಶಿವಶಂಕರಪ್ಪ ಅವರ ಪುತ್ರ, ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ನಿವಾಸದಲ್ಲಿ ಇಂದು ಬಸವ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಪ್ರತಿವರ್ಷವೂ ಬಸವ ಜಯಂತಿಯಂದು ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಕುಟುಂಬದವರು ಎತ್ತುಗಳಿಗೆ ಪೂಜೆ ಮಾಡುವ ಮೂಲಕ ಬಸವ ಜಯಂತಿಯನ್ನು ಆಚರಿಸುತ್ತಾ ಬಂದಿದ್ದು, (3ನೇ ಪುಟಕ್ಕೆ)

## ಮಕ್ಕಳಿಗೆ ಈಗ ಕೊವೊವ್ಯಾಕ್ಸ್ ಲಭ್ಯ : ಪೂನಾವಾಲಾ

ನವದೆಹಲಿ, ಮೇ 3 – ಕೊರೊನಾ ಲಸಿಕೆಯಾದ ಕೊವೊವ್ಯಾಕ್ಸ್ ಈಗ ದೇಶಾದ್ಯಂತ ಮಕ್ಕಳಿಗೆ ಲಭ್ಯವಿದೆ ಎಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿ.ಇ.ಒ. ಅದರ್ ಪೂನಾವಾಲಾ ಹೇಳಿದ್ದಾರೆ.

ಈ ಲಸಿಕೆ ಭಾರತದಲ್ಲಿ ಉತ್ಪಾದನೆಯಾಗುತ್ತಿದ್ದು, ಯುರೋಪ್‌ನಲ್ಲೂ ಮಾರಾಟವಾಗುತ್ತಿದೆ. ಇದು ಶೇ.90ಕ್ಕಿಂತ ಹೆಚ್ಚಿನ ದಕ್ಷತೆ ಹೊಂದಿದೆ ಎಂದವರು ತಿಳಿಸಿದ್ದಾರೆ. 12 ರಿಂದ 17 ವರ್ಷದ ಮಕ್ಕಳು ಖಾಸಗಿ ಕೇಂದ್ರಗಳಲ್ಲಿ ಕೊವೊವ್ಯಾಕ್ಸ್ ಲಸಿಕೆ ಪಡೆಬಹುದು. ಇದರ ಪ್ರತಿ ಡೋಸ್ ವೆಚ್ಚ 900 ರೂ. ಹಾಗೂ 150 ರೂ.ಗಳ ಸೇವಾ ಶುಲ್ಕ ಪ್ರತ್ಯೇಕವಾಗಿದೆ.

## ಮಕ್ಕಳ ಕೊರೊನಾ ಲಸಿಕೆ ತಡೆಗೆ ಸುಪ್ರೀಂ ನಕಾರ

ನವದೆಹಲಿ, ಮೇ 3 - ಮಕ್ಕಳಿಗೆ ನೀಡುತ್ತಿರುವ ಕೊರೊನಾ ಲಸಿಕೆ ಅವೈಜ್ಞಾನಿಕ, ಅದನ್ನು ತಡೆಯಬೇಕು ಎಂಬ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ರಾಷ್ಟ್ರೀಯ ಲಸಿಕಾ ಸಮಿತಿಯ ಮಾಜಿ ಸದಸ್ಯ ಡಾ. ಜಾಕೊಬ್ ಪುಲಿಯೆಲ್ ಎಂಬುವವರು ಸುಪ್ರೀಂ ಕೋರ್ಟ್‌ನಲ್ಲಿ ಈ ಬಗ್ಗೆ ಅರ್ಜಿ ದಾಖಲಿ ಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ, ಮಕ್ಕಳ ಲಸಿಕಾ ಸುರಕ್ಷತೆ ಕುರಿತ ವೈಜ್ಞಾನಿಕ ವಿಶ್ಲೇಷಣೆಯನ್ನು ನ್ಯಾಯಾಲಯ ನೆನೆಗುದಿಗೆ ಇಟ್ಟು ವಿಳಂಬ ಮಾಡಲಾಗದು ಎಂದು ಹೇಳಿದೆ.

ಜಾಗತಿಕ ವೈಜ್ಞಾನಿಕ ಸರ್ವಸಮ್ಮತಿ ಹಾಗೂ ಪರಿಣಿತರ ಸಂಸ್ಥೆಗಳ ಅಭಿಪ್ರಾಯದಂತೆ ಕೇಂದ್ರ ಸರ್ಕಾರ ಮಕ್ಕಳಿಗೆ ಲಸಿಕೆ ನೀಡುವ ನಿರ್ಧಾರ ತೆಗೆದುಕೊಂಡಿದೆ. ಲಸಿಕೆ ಮಕ್ಕಳಿಗೆ ಯಾವುದೇ ಹಾನಿ ಮಾಡುವುದಿಲ್ಲ ಎಂಬುದನ್ನು ದಾಖಲೆಗಳೂ ತಿಳಿಸಿವೆ ಎಂದು ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಹಾಗೂ ಬಿ.ಆರ್. ಗವಾಯಿ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಸುಪ್ರೀಂ ಕೋರ್ಟ್‌ಗೆ ಮಾಹಿತಿ ಸಲ್ಲಿಸಿದ್ದ ಕೇಂದ್ರ ಸರ್ಕಾರ, 15ರಿಂದ 18 ವರ್ಷದ 8.91 ಕೋಟಿ ಮಕ್ಕಳಿಗೆ ಮಾರ್ಚ್ 12, 2022ರವರೆಗೆ ಲಸಿಕೆ ನೀಡಲಾಗಿದೆ. ಇವರಲ್ಲಿ (3ನೇ ಪುಟಕ್ಕೆ)

## ಎಲ್.ಐ.ಸಿ. ಷೇರು ಕಡಿಮೆ ಬೆಲೆಗೆ

### 30 ಸಾವಿರ ಕೋಟಿ ರೂ. ನಷ್ಟ : ಕಾಂಗ್ರೆಸ್ ಆರೋಪ

ನವದೆಹಲಿ, ಮೇ 3 – ಎಲ್.ಐ.ಸಿ. ಷೇರುಗಳನ್ನು ಕಡಿಮೆ ಬೆಲೆಗೆ ಮಾರಲಾಗುತ್ತಿದೆ. ಆ ಮೂಲಕ 30 ಕೋಟಿ ಪಾಲಿಸಿದಾರರಿಗೆ ಧಕ್ಕೆಯಾಗುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ವಕ್ತಾರ ರಣದೀಪ್ ಸುರ್ಜೇವಾಲಾ, ಸರ್ಕಾರ ಎಲ್.ಐ.ಸಿ. ಮೌಲ್ಯ 12-14 ಲಕ್ಷ ಕೋಟಿ ರೂ. ಎಂದು ಎರಡು ತಿಂಗಳ ಹಿಂದೆ ಹೇಳಿತ್ತು. ಈಗ ಅದರ ಮೌಲ್ಯವನ್ನು 6 ಲಕ್ಷ ಕೋಟಿ ರೂ.ಗಳಿಗೆ ಇಳಿಸಿರುವುದು ಏಕೆ? ಎಂದು (3ನೇ ಪುಟಕ್ಕೆ)

## ಅಪ್ಪುಗೆ ಮರಣೋತ್ತರ ಬಸವಶ್ರೀ ಪ್ರಶಸ್ತಿ



**ಮುರುಘಾ ಶರಣರಿಂದ ಪ್ರಶಸ್ತಿ ಸ್ವೀಕರಿಸಿದ ಪುನೀತ್ ಪತ್ನಿ ಅಶ್ವಿನಿ**

ಚಿತ್ರದುರ್ಗ, ಮೇ 3- ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿಂದು ಹೆಸರಾಂತ ನಟ ಮತ್ತು ಸಾಂಸ್ಕೃತಿಕ ರಾಯಭಾರಿ ಡಾ. ಪುನೀತ್ ರಾಜಕುಮಾರ್ ಅವರಿಗೆ ಮರಣೋತ್ತರವಾಗಿ 2021ನೇ ಸಾಲಿನ ಬಸವಶ್ರೀ ಪ್ರಶಸ್ತಿಯನ್ನು ಶ್ರೀಮತಿ ಅಶ್ವಿನಿ ಪುನೀತ್ ರಾಜಕುಮಾರ್ ಅವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ಐದು ಲಕ್ಷ ರೂ. ನಗದು ಮತ್ತು ಸ್ಮರಣ ಫಲಕವನ್ನೊಳಗೊಂಡಿದೆ.

ಬಸವ ಜಯಂತಿ ಅಂಗವಾಗಿ ಸರ್ವಶರಣ, ಸಂತ ಮತ್ತು ದಾರ್ಶನಿಕರ ಸ್ಮರಣೆ ಕಾರ್ಯಕ್ರಮದಲ್ಲಿ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಡಾ. ಶಿವಮೂರ್ತಿ ಮುರುಘಾ ಶರಣರು, ಅಶ್ವಿನಿ ಅವರಿಗೆ ಬಸವಶ್ರೀ ಪ್ರಶಸ್ತಿ ಕೊಡುವುದರ ಮೂಲಕ ಅವರ ಕುಟುಂಬಕ್ಕೆ ಗೌರವ ಸಲ್ಲಿಸಲಾಗುತ್ತಿದೆ. ಪುನೀತ್ ಅವರು ನಟರಾಗಿ, ನಿರ್ಮಾಪಕರಾಗಿ, ಸಾಂಸ್ಕೃತಿಕ ರಾಯಭಾರಿಯಾಗಿ ಮಾನವೀಯ ಕಳಕಳಿಯ ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದಾರೆ. ಬಸವ ಸಂಸ್ಕೃತಿ ಸರ್ವರ ಸಂಸ್ಕೃತಿ. ಅದು ಲಿಂಗಾಯತರಿಗೆ ಮಾತ್ರ ಸಂಬಂಧಿಸಿದ ಸಂಸ್ಕೃತಿಯಲ್ಲ. ಅದು ಎಲ್ಲರೊಳಗೊಳ್ಳುವ ಸಮಗ್ರ ಸಂಸ್ಕೃತಿ ಎಂದು ಹೇಳಿದರು.

ಹಿರಿಯ ಸಾಹಿತಿ, ನಾಟಕಕಾರ ಡಾ. ರಾಜಪ್ಪ ದಳವಾಯಿ ಮಾತನಾಡಿ, ಈ ದೇಶ ಕಂಡ ಮಹಾನ್ ಕಲಾವಿದ. ಹುಟ್ಟುತ್ತಲೇ ಕಲಾವಿದರಾಗಿ ಅಭಿನಯಿಸಿ ಜನಮಾನಸವನ್ನು ಆವರಿಸಿಕೊಂಡವರು ಪುನೀತ್. ನಾಡಿನ ಮಠ ಪರಂಪರೆಯಲ್ಲಿ ಮುರುಘಾಮಠದ್ದು ದೊಡ್ಡ ಕೊಡುಗೆ. ಹಾಗೆಯೇ ಡಾ. ರಾಜ್ ಕುಟುಂಬವು ಸಹ ಚಲನಚಿತ್ರರಂಗಕ್ಕೆ ದೊಡ್ಡ ಕೊಡುಗೆಯಾಗಿದೆ. ನಮ್ಮೆಲ್ಲರ ಆಕಾಶ ಪುನೀತ್. ಅಭಿಮಾನಿಗಳೇ ನನ್ನ ಕಾಲದ ದೇವರು ಎಂದವರು ಪುನೀತ್. ಈ ನಾಡು ಅಭಿಮಾನ ಶೂನ್ಯವಲ್ಲ. ಇನ್ನೊಬ್ಬರ ಕೂಡಿಸಿ ಬದುಕಿದ ಕುಟುಂಬ ಡಾ. ರಾಜ್ ಕುಟುಂಬ ಎಂದು ಹೇಳಿದರು.

ಕೃಷಿ ಸಚಿವ ಬಿ.ಸಿ. ಪಾಟೀಲ್ ಮಾತನಾಡಿ, ಪುನೀತ್ ರಾಜಕುಮಾರ್ ಅವರ ಹೆಸರಲ್ಲಿ ಅದೆಷ್ಟು ಶಕ್ತಿ ಇದೆ. ಹುಟ್ಟು ಮತ್ತು ಸಾವಿನ ಮಧ್ಯೆ ಅವರು ಸಾಧಿಸಿದ ಸಾಧನೆ ದೊಡ್ಡದು. ಪುನೀತ್ ಅವರ ನಟನೆ ಅಚ್ಚಳಿಯದೆ ನಿಂತಿದೆ. ಇಂದು ಬಸವಶ್ರೀ ಪ್ರಶಸ್ತಿಗೆ ದೊಡ್ಡ ಗೌರವ. ಈ ಕಾರ್ಯಕ್ರಮ ಅರ್ಥಪೂರ್ಣವಾದುದು ಎಂದರು. (2ನೇ ಪುಟಕ್ಕೆ)

## ತಲಾಕ್-ಎ–ಹಸನ್ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಮನವಿ

### ಎಲ್ಲಾ ಸ್ವರೂಪದ ನ್ಯಾಯಿಕೇತರ ತಲಾಕ್ ಸಂವಿಧಾನ ಬಾಹಿರ ಎಂದು ಘೋಷಿಸಲು ಅರ್ಜಿ

ನವದೆಹಲಿ, ಮೇ 3 – ತಲಾಕ್ ಎ ಹಸನ್ ಹಾಗೂ ಇತರೆ ಎಲ್ಲಾ ಸ್ವರೂಪದ ನ್ಯಾಯಿಕೇತರ ತಲಾಕ್‌ಗಳನ್ನು ಸಂವಿಧಾನ ಬಾಹಿರ ಎಂದು ಘೋಷಿಸುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ.

ಘಾಜಿಯಾಬಾದ್ ನಿವಾಸಿ ಬೆನಜೀರ್ ಹೀನ ಎಂಬುವವರು ಅರ್ಜಿ ದಾಖಲಿಸಿದ್ದಾರೆ. ತಲಾಕ್ - ಎ – ಹಸನ್' ರೀತಿಯ ತಲಾಕ್‌ಗಳು ಅಸಂಬದ್ಧ, ಅತಾರ್ಕಿಕ ಹಾಗೂ ಸಂವಿಧಾನದ ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಎಲ್ಲಾ ನಾಗರಿಕರ ವಿಚ್ಛೇದನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತಟಸ್ಥ ಹಾಗೂ ಏಕರೂಪದ ಮಾರ್ಗಸೂಚಿ ರೂಪಿಸುವಂತೆ ನಿರ್ದೇಶನ ನೀಡಬೇಕು ಎಂದೂ ಅರ್ಜಿಯಲ್ಲಿ ಕೋರಲಾಗಿದೆ.

ತಲಾಕ್ - ಎ -ಹಸನ್‌ನಲ್ಲಿ ತಿಂಗಳಿಗೆ ಒಂದು ತಲಾಕ್‌ನಂತೆ ಮೂರು ತಿಂಗಳಿಗೆ ತಲಾಕ್ ನೀಡ (2ನೇ ಪುಟಕ್ಕೆ)

## ಲೆಕ್ಕ ಪರಿಶೋಧನೆಯಲ್ಲಿ 50 ವರ್ಷ ಅಥಣಿ ವೀರಣ್ಣ ಸೇವೆಗೆ ಐಸಿಎಐ ಪ್ರಶಂಸೆ






ದಾವಣಗೆರೆ, ಮೇ 3 - ನಗರದ ಹಿರಿಯ ಕೈಗಾರಿಕೋದ್ಯಮಿಯೂ ಆಗಿರುವ ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ ಅವರು ಲೆಕ್ಕ ಪರಿಶೋಧನೆ ವೃತ್ತಿಯಲ್ಲಿ 50 ವರ್ಷ ಪೂರೈಸಿರುವುದನ್ನು ಐಸಿಎಐ ಪರಿಗಣಿಸಿ ಪ್ರಶಂಸನೀಯ ಸನ್ಮಾನ ಪತ್ರ ನೀಡಿ ಅಭಿನಂದಿಸಿದೆ. ವೀರಣ್ಣ ಅವರು ಕಳೆದ 53 ವರ್ಷಗಳಿಂದ ಲೆಕ್ಕ ಪರಿಶೋಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ದಿ|| ಸಿ.ಆರ್. ಶ್ರೀನಿವಾಸಮೂರ್ತಿ ಇವರ ಪತ್ನಿ ಸಿ.ಎಸ್. ಸೀತಾಲಕ್ಷ್ಮಿ ನಿಧನ**



ದಾವಣಗೆರೆ ನಿವಾಸಿಯಾದ
ಶ್ರೀ ವೆಂಕಟೇಶ್ವರ ಪ್ರಾವಿಷನ್ ಸ್ಟೋರ್ಸ್‌ನ ಮಾಲೀಕರಾದ
ಗಾಂಧಿ ಸರ್ಕಲ್, ರೈಲ್ವೆ ಗೇಟ್ ಹತ್ತಿರ, ದಾವಣಗೆರೆ.
ದಿ|| ಸಿ. ಆರ್. ಶ್ರೀನಿವಾಸಮೂರ್ತಿ
ಇವರ ಧರ್ಮಪತ್ನಿ ಶ್ರೀಮತಿ ಸಿ.ಎಸ್. ಸೀತಾಲಕ್ಷ್ಮಿ
ಇವರು ದಿನಾಂಕ : 03.05.2022ರ ಮಂಗಳವಾರ ಮಧ್ಯಾಹ್ನ 2.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.5.2022ರ ಬುಧವಾರದಂದು ಬೆಳಿಗ್ಗೆ 9.00 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು : ಶ್ರೀಮತಿ ಆಶಾ ಪ್ರಸನ್ನ,
ಶ್ರೀಮತಿ ಸುಹಾಸಿನಿ ಮತ್ತು ಶ್ರೀ ಮಧು, ಶ್ರೀಮತಿ ಗೀತಾ ಮತ್ತು ಶ್ರೀ ಹರೀಶ್
ಶ್ರೀಮತಿ ಸ್ವಾತಿ ಮತ್ತು ಶ್ರೀ ವಿಶ್ವಾಸ್, ಶ್ರೀಮತಿ ಶ್ವೇತಾ ಶ್ರೀ ಶ್ರೇಯಸ್
ಹಾಗೂ ಶ್ರೀ ಮಾಕನೂರು ಕುಟುಂಬ ವಂಶಸ್ಥರು
ಶ್ರೀ ವೆಂಕಟೇಶ್ವರ ಪ್ರಾವಿಷನ್ ಸ್ಟೋರ್ಸ್ ಸಿಬ್ಬಂದಿ ವರ್ಗ. 94499 73865

# ಹರಿಹರ : ಬಸವ ಜಯಂತಿಯ ಅದ್ಧೂರಿ ಮೆರವಣಿಗೆ



ಹರಿಹರ, ಮೇ 3 - ನಗರದಲ್ಲಿ ಶ್ರೀ ಬಸವೇಶ್ವರ ಜಯಂತಿ ಅಂಗವಾಗಿ ಮುರುಘರಾಜೇಂದ್ರ ಕಲ್ಯಾಣ ಮಂಟಪದಲ್ಲಿರುವ ಶ್ರೀ ಬಸವೇಶ್ವರ ಮೂರ್ತಿಗೆ ಮತ್ತು 108 ಲಿಂಗೇಶ್ವರ ದೇವಸ್ಥಾನದಲ್ಲಿರುವ ಶ್ರೀ ಬಸವೇಶ್ವರ ಮೂರ್ತಿಗೆ ಮಹಾರುದ್ರಾಭಿಷೇಕ ಹೂವಿನ ಅಲಂಕಾರ, ಮಹಾಮಂಗಳಾರತಿ ಮಾಡಿ ನಂತರದಲ್ಲಿ ಪಲ್ಲಕ್ಕಿಯಲ್ಲಿ ಶ್ರೀ ಬಸವೇಶ್ವರ ಉತ್ಸವ ಮೂರ್ತಿಯನ್ನಿರಿಸಿ ಅದ್ಧೂರಿಯಾಗಿ ಮೆರವಣಿಗೆ ಮಾಡಲಾಯಿತು.

ಡೊಳ್ಳು ಕುಣಿತ ಸಮಾಳ ಸೇರಿದಂತೆ ವಿವಿಧ ಕಲಾ ತಂಡದವರಿಂದ ಸಾಗಿದ ಮೆರವಣಿಗೆ ಶ್ರೀ ಮರುಘರಾಜೇಂದ್ರ ಕಲ್ಯಾಣ ಮಂಟಪದ ಮುಂಭಾಗದಿಂದ ಆರಂಭಗೊಂಡು ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ಪುನಃ ದೇವಸ್ಥಾನಕ್ಕೆ ಬಂದು ತಲುಪಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕರುಗಳಾದ ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ಬಸವೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ.ಜೆ. ಶಿವಾನಂದಪ್ಪ, ಜಿ.ಕೆ. ಮಲ್ಲಿಕಾರ್ಜುನ, ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಕೊಟ್ರೇಶ್ ಭಾನುವಳ್ಳಿ, ಪ್ರಕಾಶ್ ಕೋಳೂರು, ಜಿ.ಕೆ. ವೀರಣ್ಣ, ಕಂಚಿಕೇರಿ ಕರಿಬಸಪ್ಪ, ಚಂದ್ರಶೇಖರ್ ಪೂಜಾರ್, ನಾಗರಾಜ್ ವಕೀಲರು, ಅಂಗಡಿ ಮಂಜುನಾಥ್, ರುದ್ರೆಗೌಡ, ಅಂಜು ರಾಜನವರ್, ಎನ್. ಇ ಸುರೇಶ್, ಹರೀಶ್ ಬನ್ನಿಕೋಡು, ಲೋಕೇಶ್ ಬನ್ನಿಕೋಡು, ಗಂಗನಹರಸಿ ಉಮೇಶ್, ನಾಗರಾಜ್ ಗೌಡ, ಕತ್ತಲಗೇರಿ ಶಿವಯೋಗಿ, ಉಮ್ಮಣ್ಣ, ಎಂ. ವಿ. ಹೊರಿಕೇರಿ, ಈಶಪ್ಪ ಬೂದಿಹಾಳ, ಸಮಾಳ ಚಂದ್ರಪ್ಪ ಮತ್ತಿತರರು ಹಾಜರಿದ್ದರು.

# 'ತಪ್ಪು ಮಾಡಿದ್ದರೆ ನೇಣಿಗೆ ಏರಲು ಸಿದ್ಧ' : ರೇಣುಕಾಚಾರ್ಯ



ಹೊನ್ನಾಳಿ, ಮೇ 3- ನಾನು ಯಾವುದೇ ಸಮಾಜಕ್ಕೆ ಅನ್ಯಾಯ ಮಾಡಿಲ್ಲ, ದಲಿತ ಸಮಾಜದ ಯಾವುದೇ ಸವಲತ್ತನ್ನು ನಾನು ಪಡೆದಿಲ್ಲ, ನಾನು ತಪ್ಪು ಮಾಡಿದ್ದರೆ ನೇಣಿಗೆ ಏರಲು ಕೂಡ ಸಿದ್ಧ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಕೋಣನತಲೆ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಅವರ 131 ನೇ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಸಾಮಾನ್ಯ ವ್ಯಕ್ತಿಯನ್ನು ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನ ಜನರು ಮೂರು ಬಾರಿ ಶಾಸಕನನ್ನಾಗಿ ಮಾಡಿದ್ದು ತುಂಬು ಹೃದಯದ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಲಂಡನ್ ನಲ್ಲಿ ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣ ಮಾಡಿಸುವುದರ ಜೊತೆಗೆ, ದೆಹಲಿಯಲ್ಲಿ ನೂರು ಕೋಟಿ ವೆಚ್ಚದಲ್ಲಿ ಅಂಬೇಡ್ಕರ್ ಅವರ ಮ್ಯೂಜಿಯಂ ನಿರ್ಮಾಣ ಮಾಡಿಸಿದ್ದಾರೆ. ಅದೇ ರೀತಿ ರಾಜ್ಯ ಸರ್ಕಾರವೂ ಕೂಡ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳನ್ನು ತಲುಪಿಸುತ್ತಿದೆ ಎಂದು ಹೇಳಿದರು.

ನಾನು ಮೀಸಲಾತಿ ಕಬಳಿಸಿದ್ದೇನೆ ಎಂದು ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡಿ, ತಮ್ಮ ಹಿಂಬಾಲಕರ ಮೂಲಕ ಪ್ರತಿಭಟನೆ ಮಾಡಿಸಿದ್ದು, ಪ್ರತಿಭಟನೆ ಪ್ಲಾಪ್ ಆಯಿತು. ಅವರೆಲ್ಲಾ ಮಾಜಿ ಶಾಸಕರ ಡ್ರಾಮಾ ಕಂಪನಿಯವರು ಎಂದು ವ್ಯಂಗ್ಯವಾಡಿದರು.

ಮಾಜಿ ಶಾಸಕರಿಗೆ ತಾಕತ್ತು ಇದ್ದರೇ ಅಂಬೇಡ್ಕರ್ ಜಯಂತಿ ಆಚರಣೆ ಮಾಡಲಿ ಎಂದು ಸವಾಲು ಹಾಕಿದ ರೇಣುಕಾಚಾರ್ಯ ದಲಿತರು ಮನೆಗೆ ಬಂದರೆ ಅವರನ್ನು ಮನೆಯ ಒಳಗೆ ಬಿಡದೇ ರೈಸ್ ಮಿಲ್‌ನಲ್ಲಿಯೇ ನಿಲ್ಲಿಸುತ್ತೀರಿ ಎಂದು ಟೀಕಿಸಿದರು. ಜಯಮ್ಮ, ದಾಳೆಮ್ಮ ಮಾತನಾಡಿದರು.

# ಬಸವ ಜಯಂತಿಯಂದು ರೈತರ ಒಡನಾಡಿ ಬಸವಣ್ಣನ ಪೂಜೆಯೊಂದಿಗೆ ರೈತರ ಧರಣಿ



> ಬಸವಣ್ಣನ ಹೆಸರನ್ನಿಟ್ಟುಕೊಂಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೇ ಇಂದಾದರೂ ರೈತರ ಸಮಸ್ಯೆ ಬಗ್ಗೆ ಗಮನ ಹರಿಸುತ್ತೇನೆಂದು ಸಂಕಲ್ಪ ಮಾಡಿ.
>
> - ರವೀಂದ್ರಗೌಡ ಎಫ್. ಪಾಟೀಲ

ರಾಣೇಬೆನ್ನೂರು, ಮೇ 3- ವಿಶ್ವಗುರು ಬಸವಣ್ಣನ ಹೆಸರನ್ನಿಟ್ಟುಕೊಂಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೇ ಈ ಬಸವ ಜಯಂತಿಯಂದು ಕಾಯಕ ಯೋಗಿ, ನಾಡಿನ ಅನ್ನದಾತ ರೈತನ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ತಮ್ಮ ತವರು ಜಿಲ್ಲೆಯ ರೈತರಿಗಾಗಿ ಇಂದಾದರೂ ಪ್ರಾಮಾಣಿಕ ಸಂಕಲ್ಪ ಮಾಡಿ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು.

ಮಾಕನೂರಿನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖಾ ಕಛೇರಿಯ ಮುಂದೆ ಓಟಿಸ್ ಯೋಜನೆಗೆ (ಏಕ ತೀರುವಳಿ) ಒತ್ತಾಯಿಸಿ ನಡೆಯುತ್ತಿರುವ ರೈತರ 42 ನೇ ದಿನದ ಅಹೋರಾತ್ರಿ ಧರಣಿ ಸತ್ಯಾಗ್ರಹದ ಧರಣಿ ನಿರತ ಪ್ರದೇಶದಲ್ಲಿ ಇಂದು ಬಸವ ಜಯಂತಿ ಪ್ರಯುಕ್ತ ರೈತರ ಒಡನಾಡಿಯಾಗಿರುವ ಎತ್ತುಗಳಿಗೆ ಪೂಜೆ ಸಲ್ಲಿಸುವ ಮೂಲಕ ಧರಣಿ ನಿರತ ರೈತರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಇಂದು ರಾಜ್ಯದಲ್ಲಿ ಬಸವ ಜಯಂತಿ ಮತ್ತು ರಂಜಾನ್" ಹಬ್ಬ ಅತ್ಯಂತ ಸಡಗರದಿಂದ ನಡೆಯುತ್ತಿದ್ದು, ಆದರೆ ಓಟಿಸ್ ಯೋಜನೆಗೆ ಒತ್ತಾಯಿಸಿ ನಡೆಯುತ್ತಿರುವ ಮುಖ್ಯಮಂತ್ರಿಗಳ ತವರು ಜಿಲ್ಲೆಯ ರೈತರ ಸಮಸ್ಯೆಯನ್ನು ಸರ್ಕಾರ ಮತ್ತು ಬ್ಯಾಂಕ್ ಹಿರಿಯ ಅಧಿಕಾರಿಗಳು ಹಾಗೂ ಜಿಲ್ಲಾಡಳಿತ ಆಲಿಸದೇ ಹೋಗಿರುವುದು ದುರ್ದೈವದ ಸಂಗತಿ ಎಂದರು.

ಜಿಲ್ಲಾ ರೈತ ಸಂಘದ ಅಧ್ಯಕ್ಷ ಈರಣ್ಣ ಹಲಗೇರಿ ಮಾತನಾಡಿ, ಜಿಲ್ಲಾ ಆಡಳಿತದ ಮನಸ್ಥಿತಿಯನ್ನು ನೋಡಿದರೆ ನಾವು ಬರುವ ಆಗಸ್ಟ್ 15ರ ಸ್ವಾತಂತ್ರ್ಯೋತ್ಸವವನ್ನು ಕೂಡ ಇದೇ ಜಾಗದಲ್ಲಿ ಆಚರಿಸಿದರೂ ಅಚ್ಚರಿ ಪಡಬೇಕಾಗಿಲ್ಲ ಎಂದರು.

ನಾವು ಈಗಾಗಲೇ ರಸ್ತೆ ತಡೆ, ಬಾರ್‌ಕೋಲ್ ಚಳುವಳಿ ಮತ್ತು ಅರೆಬೆತ್ತಲೆ ಮೆರವಣಿಗೆ ಮಾಡಿದ್ದರೂ ಕೂಡಾ ಸರ್ಕಾರಕ್ಕೆ ನಾಚಿಕೆ ಇಲ್ಲದಂತೆ ವರ್ತಿಸುತ್ತಿದೆ. ಹೀಗಾಗಿ ನಾವು ಈ ಹಿಂದೆ ಹೇಳಿದಂತೆ ಮುಖ್ಯಮಂತ್ರಿಗಳ ಶಿಗ್ಗಾಂವಿಯ ಮನೆಯ ಮುಂದೆ ಪೂರ್ಣ ಬೆತ್ತಲೆಗೆ ನಿರ್ಧರಿಸಿದ್ದೇವೆಂದು ಹೇಳಿದರು.

ರಂಜಾನ್ ಹಬ್ಬದ ನಿಮಿತ್ತ ಮುಸ್ಲಿಂ ರೈತ ಬಾಂಧವರು, ರೈತರ ಈ ಸಮಸ್ಯೆ ಬೇಗನೆ ಬಗೆ ಹರಿಯಲಿ ಎಂದು ಮಸೀದಿಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ ಸ್ಥಳಕ್ಕೆ ಆಗಮಿಸಿ ಧರಣಿ ನಿರತರಿಗೆ ಪ್ರಸಾದ ವಿತರಿಸಿದರು. ಭಕ್ತಿಯಿಂದ ವಿಶ್ವಗುರು ಬಸವಣ್ಣನ ಪೂಜೆ ನೆರವೇರಿಸಿ ಎತ್ತುಗಳನ್ನು ಅಲಂಕರಿಸಿ ಭಕ್ತಿಯಿಂದ ಭಜನೆ ಪಠಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ರವೀಂದ್ರಗೌಡ ಎಫ್ ಪಾಟೀಲ, ಈರಣ್ಣ ಹಲಗೇರಿ, ಎಸ್.ಡಿ. ಹಿರೇಮಠ, ಹನುಮಪ್ಪ ಕುಂಬಳೂರು, ಅಶೋಕ ಗಂಗನಗೌಡ್ರ, ಬಸನಗೌಡ ಹುಲ್ಲತ್ತಿ, ಹರಿಹರಗೌಡ ಪಾಟೀಲ, ಹುಸೇನ್‌ಸಾಬ್ ಮುದೇನೂರು, ಜಮಾಲಸಾಬ ಶೇತಸನದಿ, ಭೀಮೇಶ ಮಾಕನೂರು, ಅಲ್ಲಾಭಕ್ಷ ಶೇತಸನದಿ, ಅಕ್ಬರ್‌ಸಾಬ್ ಶೇತಸನದಿ, ಚಂದ್ರಣ್ಣ ಬಿಸನಳ್ಳಿ, ದಾನಪ್ಪಗೌಡ ಗಂಗನಗೌಡ್ರ, ಮಂಜಪ್ಪ ಮುಷ್ಠೂರನಾಯ್ಕ, ಚಂದ್ರಶೇಖರಯ್ಯ ಬೇಸನೂರಮಠ, ರುದ್ರಯ್ಯ ವಿ. ಸೋಗಿಮಠ, ಬಸಣ್ಣ ಮಾಯಾಚಾರಿ, ತಿಪ್ಪಣ್ಣ ಜೋಗಿ, ಪ್ರಭುಗೌಡ ಲಿಂಗನಗೌಡ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

# ನೌಕರರಿಗೆ ಕೊಟ್ಟು ಮಗಳನ್ನು ಮದುವೆ ಮಾಡಬೇಕೆಂಬ ಆಸೆಯನ್ನು ಕೈ ಬಿಡಿ





> ಇತ್ತೀಚೆಗೆ ಕನ್ಯಾ ಸಮಸ್ಯೆ ಎದುರಾಗಿದ್ದು, ಗಂಡು ಮಕ್ಕಳು ವಯಸ್ಸಾದ ಮೇಲೆ ಮದುವೆ ಆಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಜೊತೆಗೆ ಈಗ ವಧು ದಕ್ಷಿಣೆ ಕೊಟ್ಟು ಮದುವೆ ಮಾಡಿಕೊಳ್ಳುವ ವಾತಾವರಣ ನಿರ್ಮಾಣವಾಗಲು ಆರಂಭಿಸಿದೆ.
>
> -ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಕಬ್ಬಿಣ ಕಂಥಿ ಮಠ, ರಟ್ಟಿಹಳ್ಳಿ

ಮಲೇಬೆನ್ನೂರು, ಮೇ 3- ನೌಕರಿ ಇರುವವರಿಗೆ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂಬ ಆಸೆಯಿಂದ ತಂದೆ-ತಾಯಿಗಳು ಹೊರಬಂದು ರೈತನಿಗೆ ಅಥವಾ ಸುಸಂಸ್ಕೃತ ವ್ಯಕ್ತಿಗೆ ನಿಮ್ಮ ಮಗಳನ್ನು ಮದುವೆ ಮಾಡಿದರೆ ಸಂತೋಷವಾಗಿರುತ್ತಾಳೆ ಎಂದು ರಟ್ಟಿಹಳ್ಳಿಯ ಕಬ್ಬಿಣ ಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಮಂಗಳವಾರ ಪಟ್ಟಣದ ನಂದಿಗುಡಿ ರಸ್ತೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ವತಿಯಿಂದ ಬಸವ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ 16ನೇ ವರ್ಷದ ಸಾಮೂಹಿಕ ವಿವಾಹ ಮಹೋತ್ಸವದ ಧರ್ಮಸಭೆಯನ್ನು ದೀಪ ಬೆಳಗಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಮಗಳನ್ನು ಯಾರಿಗೆ ಕೊಟ್ಟು ಮದುವೆ ಮಾಡಿದರೆ ನೆಮ್ಮದಿಯಾಗಿರುತ್ತಾಳೆಂದು ತಂದೆ-ತಾಯಿಗಳು ಚಿಂತನೆ ಮಾಡಬೇಕು. ಇತ್ತೀಚೆಗೆ ನೌಕರಿಯಲ್ಲಿರುವ ಬಹುತೇಕರಿಗೆ ಹಣ ಮಾಡುವ ಹುಚ್ಚು ಹಿಡಿದಿದ್ದು ನೆಮ್ಮದಿ ಕಳೆದುಕೊಂಡಿದ್ದಾರೆ. ರೈತರು ಹಾಗೂ ಮಧ್ಯಮ ವರ್ಗದ ಜನರು, ಸಣ್ಣ-ಸಣ್ಣ ವ್ಯಾಪಾರಿಗಳು, ಸಣ್ಣ ನೌಕರಿ ಇರುವವರು ನೆಮ್ಮದಿಯಾಗಿದ್ದು, ಅವರ ಕುಟುಂಬದಲ್ಲಿ ಸಂತೋಷವಿದೆ ಎಂದು ಸ್ವಾಮೀಜಿ ಹೇಳಿದರು.

ಮದುವೆಯನ್ನು ಯಾತಕ್ಕಾಗಿ ಮಾಡಿಕೊಳ್ಳಬೇಕೆಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಧರ್ಮದ ಸಂಸ್ಕಾರ ಪಡೆದು ಗೃಹಸ್ಥಾಶ್ರಮದ ಧರ್ಮಕ್ಕೆ ಕಾಲಿಟ್ಟರೆ ನಿಮ್ಮ ಮಕ್ಕಳಿಗೂ ಧರ್ಮದ ಸಂಸ್ಕಾರವನ್ನು ಕಲಿಸಲು ಸಾಧ್ಯವಾಗುತ್ತದೆ. ಸದೃಢ ಸಮಾಜಕ್ಕೆ ಒಳ್ಳೆಯ ಸಂತತಿ ಬೇಕು. ಅದಕ್ಕಾಗಿ ಮೊದಲು ನೀವು ಒಳ್ಳೆಯವರಾಗಿ ಸಾಮಾಜಿಕ ಜವಾಬ್ದಾರಿ ತಿಳಿದುಕೊಳ್ಳಿ ಎಂದು ಕರೆ ನೀಡಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಸಾಮೂಹಿಕ ವಿವಾಹ ಪುಣ್ಯದ ಕೆಲಸವವಾಗಿದ್ದು, ಬಡವರಿಗೆ ಸಹಕಾರಿಯಾಗಲಿದೆ. ಕಳೆದ 16 ವರ್ಷಗಳಿಂದ ಇದುವರೆಗೂ ಸುಮಾರು 400 ಕ್ಕೂ ಹೆಚ್ಚು ಮದುವೆ ಮಾಡಿಸಿರುವುದು ಶ್ಲಾಘನೀಯ ಎಂದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಮುಖಂಡರಾದ ಬಿ. ವೀರಯ್ಯ, ಕಣ್ಣಾಳ್ ಪರಶುರಾಮಪ್ಪ, ಕೆ.ಪಿ. ಗಂಗಾಧರ್, ಯುಸೂಫ್ ಮಾತನಾಡಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಕಣ್ಣಾಳ್ ಧರ್ಮಣ್ಣ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಸುರೇಶ್, ಬೆಣ್ಣೆಹಳ್ಳಿ ಸಿದ್ದೇಶ್, ಬಿ. ಮಂಜುನಾಥ್, ಭೋವಿ ಶಿವು, ಟಿ. ಹನುಮಂತಪ್ಪ, ಪಿ.ಆರ್. ರಾಜು, ಭೋವಿ ಕುಮಾರ್, ಜಿಗಳೇರ ಹಾಲೇಶಪ್ಪ, ಕೆ.ಜಿ. ಪರಮೇಶ್ವರಪ್ಪ, ಬಿ.ಎಂ. ಜಯದೇವಯ್ಯ, ಎಳೆಹೊಳೆ ಕುಮಾರ್, ಕೆಂಚನಹಳ್ಳಿ ಮಹಾಂತೇಶಪ್ಪ, ಪಿ.ಹೆಚ್. ಶಿವಕುಮಾರ್, ಗಂಗಾಮತ ಸಮಾಜದ ಅಧ್ಯಕ್ಷ ಎಂ.ಎನ್. ಮಂಜುನಾಥ್, ನಿವೃತ್ತ ಶಿಕ್ಷಕ ಎಸ್.ಜಿ. ಸಜ್ಜನ್, ರೈತ ಸಂಘದ ಮಂಜುನಾಥ್, ಭರ್ಮಳ್ಳಿ ಮಂಜಣ್ಣ, ದೇವಸ್ಥಾನ ಸಮಿತಿ ಉಪಾಧ್ಯಕ್ಷ ಮುದೇಗೌಡ್ರ ಬಸವರಾಜಪ್ಪ, ಖಜಾಂಚಿ ಪೂಜಾರ್ ಗಂಗೇನಳ್ಳೆಪ್ಪ, ವರ್ತಕ ಎಂ.ಜಿ. ಗಜಾನನ ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಿದ್ದರು.

ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಸ್ವಾಗತಿಸಿದರು. ಶಿಕ್ಷಕ ಕರಿಬಸಪ್ಪ ನಿರೂಪಿಸಿದರೆ ಶಿಕ್ಷಕ ಹಾಲೇಶ್ ವಂದಿಸಿದರು.

# ಬಸವ ಜಯಂತಿ ಸಂಭ್ರಮ

(1ನೇ ಪುಟದಿಂದ) ಅಭಿಷೇಕ ಸೇರಿದಂತೆ ವಿಶೇಷ ಪೂಜೆ ನಡೆಯಿತು. ಬೆಳಗ್ಗೆ 8ರಿಂದ 9 ಗಂಟೆವರೆಗೆ ಬಸವೇಶ್ವರರ ತೊಟ್ಟಿಲು ಪೂಜೆ ನಡೆಯಿತು. ಈ ವೇಳೆ ಶಾಸಕ ಎಸ್.ಎ. ರವೀಂದ್ರನಾಥ, ಉಪಮೇಯರ್ ಗಾಯತ್ರಿ ಬಾಯಿ, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್ ಇನ್ನಿತರರು ಆಗಮಿಸಿ ಬಸವೇಶ್ವರ ದೇವರ ದರ್ಶನ ಪಡೆದರು. ಅಂತೆಯೇ ಬಿ.ಸಿ. ಉಮಾಪತಿ ಅವರೂ ಸಹ ಪ್ರಸಾದದ ನೈವೇದ್ಯ ತಂದು ಬಸವೇಶ್ವರ ದೇವರಿಗೆ ಅರ್ಪಿಸಿ ಪೂಜೆ ಸಲ್ಲಿಸಿದರು. ಸಂಜೆ ವೇಳೆಗೆ ಬಸವೇಶ್ವರ ದೇವರ ಉತ್ಸವ ಮೂರ್ತಿಯ ಮೆರವಣಿಗೆ ನಡೆಯಿತು.

ಈ ದೇವಾಲಯಗಳಲ್ಲಿ ಮಧ್ಯಾಹ್ನ ಮಹಾದಾಸೋಹ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಬಸವೇಶ್ವರ ನಗರದ ದೊಡ್ಡಪೇಟೆಯಲ್ಲಿನ ಬಸವೇಶ್ವರ ದೇವಾಲಯದಲ್ಲಿ ದೊಡ್ಡಪೇಟೆ ಶ್ರೀ ಬಸವೇಶ್ವರ ಸೇವಾ ಸಂಘದ ಅಧ್ಯಕ್ಷ ಅಥಣಿ ಎಸ್. ವೀರಣ್ಣ ಮತ್ತು ಸಹೋದರರಿಂದ ಮಹಾದಾಸೋಹ ಏರ್ಪಡಿಸಲಾಗಿತ್ತು. ಸಂಜೆ ಶ್ರೀ ಬಸವೇಶ್ವರರ ಬೆಳ್ಳಿ ಪುತ್ಥಳಿಯ ಮೆರವಣಿಗೆ ನಡೆಯಿತು.

ಇನ್ನೂ ಬಸವರಾಜಪೇಟೆಯ ಶ್ರೀ ಬಸವೇಶ್ವರ, ಶ್ರೀ ವೀರೇಶ್ವರ ದೇವಸ್ಥಾನ ಸಮಿತಿ ವತಿಯಿಂದ ಬಸವೇಶ್ವರ ದೇವಾಲಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಮಧ್ಯಾಹ್ನ ಭಕ್ತರಿಗೆ ಅನ್ನದಾಸೋಹ ಕಾರ್ಯಕ್ರಮ ನಡೆಯಿತು.

ಸಂಜೆ ದೇವರ ಉತ್ಸವ ಮೂರ್ತಿಯ ಮೆರವಣಿಗೆ ನಡೆಯಿತು. ದೇವಾಲಯದ ಆವರಣದಿಂದ ಆರಂಭಗೊಂಡ ಮೆರವಣಿಗೆಯು ಮಹಾರಾಜಪೇಟೆ, ವಿಠಲ ಮಂದಿರ, ಚೌಕಿ ಪೇಟೆ ಸೇರಿದಂತೆ ಹಳೆ ದಾವಣಗೆರೆ ಭಾಗದಲ್ಲಿ ಸಂಚರಿಸಿತು. ಈ ವೇಳೆ ಸಮಿತಿ ಅಧ್ಯಕ್ಷ ಪ್ರಭು ಕಲಬುರ್ಗಿ, ಪ್ರಧಾನ ಕಾರ್ಯದರ್ಶಿ ಎಂ. ದೊಡ್ಡಪ್ಪ, ಚನ್ನಪ್ಪ ಕುಂಟೋಜಿ, ಹನುಮಂತಪ್ಪ ಮುತ್ತಿಗಿ, ಪ್ರಕಾಶ್ ಬೂದಿಹಾಳ್, ನಂಜುಂಡಪ್ಪ ನಾರಪ್ಪ, ಮಲ್ಲಣ್ಣ ದೇಸಾಯಿ, ತವರಿನ ಜಯಣ್ಣ, ಮಹಾದೇವಪ್ಪ ಮರವಂಜಿ, ವಿಜಯ ಕುಮಾರ್ ರೈಲ್ವೆ, ರುದ್ರಮ್ಮ ಮಲ್ಲಿಕಾರ್ಜುನ, ಗೌರಮ್ಮ, ನೀಲಮ್ಮ, ಮಣಿಕಂಠ ಮತ್ತಿತರರು ಭಾಗವಹಿಸಿದ್ದರು.

# ಬಸವಶ್ರೀ ಪ್ರಶಸ್ತಿ

(1ನೇ ಪುಟದಿಂದ) ಶಾಸಕ ತಿಪ್ಪಾರೆಡ್ಡಿ ಮಾತನಾಡಿದರು. ಜಿಲ್ಲಾಧಿಕಾರಿ ಶ್ರೀಮತಿ ಕವಿತಾ ಮನ್ನಿಕೇರಿ, ಜಿ.ಪಂ. ಸಿಇಓ ಡಾ. ನಂದಿನಿದೇವಿ, ಶ್ರೀಮತಿ ಮಂಗಳಾ ರಾಘವೇಂದ್ರ ರಾಜಕುಮಾರ್, ಚಿತ್ರೋದ್ಯಮಿ ಚಿನ್ನೇಗೌಡರು, ಪಟೇಲ್ ಶಿವಕುಮಾರ್, ಎಸ್ಪಿ ಪರಶುರಾಂ, ರಾಜ್ಯ ಖನಿಜ ನಿಗಮದ ಅಧ್ಯಕ್ಷ ಎಸ್.ಲಿಂಗಮೂರ್ತಿ, ವಾಸು ಮೊದಲಾದವರು ವೇದಿಕೆಯಲ್ಲಿದ್ದರು.

ಜಮುರಾ ಕಲಾವಿದರು ವಚನ ಪ್ರಾರ್ಥನೆ ಹಾಡಿದರು. ವಿಧಾನಪರಿಷತ್ ಸದಸ್ಯ ಕೆ.ಎಸ್. ನವೀನ್ ಸ್ವಾಗತಿಸಿದರು. ಶ್ರೀಮತಿ ಸುರೇಖಾ ಸುರೇಶ್ ಕಾರ್ಯಕ್ರಮ ನಿರೂಪಿಸಿದರು. ನಂತರ ನಡೆದ ಸಹಪಂಕ್ತಿ ಭೋಜನದಲ್ಲಿ ವಿವಿಧ ಧರ್ಮಗುರುಗಳು ಭಾಗವಹಿಸಿದ್ದರು.

# ದುಡಿದೇ ತಿನ್ನಬೇಕು ಎಂಬುದನ್ನು ಸಾರಿ ಸಾರಿ ಹೇಳಿದ ಬಸವಣ್ಣ



ಹರಪನಹಳ್ಳಿ ಉಪವಿಭಾಗಾಧಿಕಾರಿ ಹೆಚ್.ಜಿ.ಚಂದ್ರಶೇಖರಯ್ಯ

ಹರಪನಹಳ್ಳಿ, ಮೇ 3- ಸ್ಥಾವರ ಸಂಸ್ಕೃತಿಯನ್ನು ಚಲನಗೊಳಿಸಿ ಜಂಗಮ ಸಂಸ್ಕೃತಿಯನ್ನು ಜಾರಿಗೆ ತಂದ ಸಮಾನತೆಯ ಹರಿಕಾರ ಬಸವಣ್ಣ ಎಂದು ಉಪವಿಭಾಗಾಧಿಕಾರಿ ಹೆಚ್.ಜಿ.ಚಂದ್ರಶೇಖರಯ್ಯ ಹೇಳಿದರು.

ಪಟ್ಟಣದ ಸಾಮರ್ಥ್ಯ ಸೌಧದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಏರ್ಪಡಿಸಿದ್ದ ಶ್ರೀ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಡವ ಬಲ್ಲಿದರೆಂಬ ವರ್ಗಭೇದವನ್ನು ತೊಡೆದು ಹಾಕಲು ಬಸವಣ್ಣನವರು ಕಾಯಕ ಮತ್ತು ದಾಸೋಹ ಎಂಬೆರಡು ಅಪೂರ್ವ ಮತ್ತು ವಿಶ್ವಮಾನ್ಯ ತತ್ವಗಳನ್ನು ಆಚರಣೆಗೆ ತರುವ ಮೂಲಕ ದುಡಿದೇ ತಿನ್ನಬೇಕು ಎಂಬುದನ್ನು ಸಾರಿ ಸಾರಿ ಹೇಳಿದರು. ಬಸವಣ್ಣನವರ ಆದರ್ಶ, ತತ್ವಗಳು ಸಾರ್ವಕಾಲಿಕವಾಗಿದ್ದು, ಅವುಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಎಂ. ರಾಜಶೇಖರ್ ಮಾತನಾಡಿ ಜಾತಿ ಭೇದವಿಲ್ಲದೆ ನೂರಾರು ವರ್ಷಗಳಿಂದ ಆಚರಿಸಿಕೊಂಡು ಬಂದ ಹಬ್ಬ ಬಸವ ಜಯಂತಿಯಾಗಿದ್ದು 12ನೇ ಶತಮಾನದಲ್ಲಿ ಶೋಷಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು ಅಂತರ್ ಜಾತಿ ವಿವಾಹ ಮಾಡುವ ಮೂಲಕ ಸಮಾನತೆಗೆ ಶ್ರಮಿಸಿದ ಅವರ ಆದರ್ಶಗಳು ನಮಗೆ ದಾರಿ ದೀಪವಾಗಿವೆ ಎಂದರು.

ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತ್‌ಕರ್ ಮಾತನಾಡಿ, ದಯವೇ ಧರ್ಮದ ಮೂಲವಾಗುವ ಮೂಲಕ ಸಕಲ ಜೀವ ರಾಶಿಗೆ ಲೇಸನ್ನು ಬಯಸಿದರು. ಬಸವಣ್ಣನವರ ತತ್ವಾದೇಶಗಳನ್ನು ಈ ನಾಡಿನ ಅನೇಕ ವೀರಶೈವ ಲಿಂಗಾಯತ ಧರ್ಮ ಪೀಠಗಳು, ವಿರಕ್ತ ಮಠಗಳು ವಿವಿಧ ಸಮುದಾಯದ ಕಲ್ಯಾಣ ಕೇಂದ್ರಗಳು ಆಚರಣೆಗೆ ತಂದಿವೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಯರಗುಡಿ ಶಿವಕುಮಾರ ಮಾತನಾಡಿ, ಬಸವ ಜಯಂತಿ ಎಂದರೆ ಎತ್ತುಗಳನ್ನು ಪೂಜೆ ಮಾಡುವುದಲ್ಲ. ಬಸವಣ್ಣನೆಂದರೆ ಗುರು, ಬಸವಣ್ಣನೆಂದರೆ ಜಂಗಮ. ಬಸವಣ್ಣನೆಂದರೆ ಬ್ರಹಾಂಡ ಚೈತನ್ಯ ಎಂದರು. ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಪ್ರಭಾಕರಗೌಡ, ತಾಲ್ಲೂಕು ಪಂಚಾಯಿತಿ ಕಾರ್ಯನಿವಾಹಣಾಧಿಕಾರಿ ಕೆ.ಆರ್ ಪ್ರಕಾಶ್, ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ, ವೀರಶೈವ ಮಹಾಸಭಾದ ತಾಲ್ಲೂಕು ಕಾರ್ಯದರ್ಶಿ ಟಿ.ಎಚ್.ಎಂ. ಮಲ್ಲಿಕಾರ್ಜುನಯ್ಯ, ಸಮಾಜ ಕಲ್ಯಾಣ ಇಲಾಖೆಯ ದೇವೇಂದ್ರಪ್ಪ, ನಿಲಯ ಪಾಲಕ ಬಸವರಾಜ ಇತರರಿದ್ದರು.

# ಯುವಕರಿಗೆ ಅವಕಾಶ: ಷಾ

(1ನೇ ಪುಟದಿಂದ) ಮಹೋತ್ಸವದ ಈ ಸಂದರ್ಭದಲ್ಲಿ ಇದು ಕೇಂದ್ರ ಸರ್ಕಾರದ ಪ್ರತಿಜ್ಞೆಯಾಗಿದೆ ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಇದು ಪರಿವರ್ತನೆಯ ಪರ್ವಕಾಲವಾಗಿದೆ. ಜನಸಂಖ್ಯೆಯಲ್ಲಿ ಶೇ.46ರಷ್ಟಿರುವ ಯುವಜನರನ್ನು ದೇಶದ ಆಸ್ತಿಯೆಂದು ಭಾವಿಸಲಾಗಿದೆ ಎಂದು ಹೇಳಿದರು. ಯುವಜನರಿಗೆ ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣ ಇವೇ ಸರ್ಕಾರದ ಮೂಲಮಂತ್ರಗಳಾಗಿವೆ. ಕ್ಯಾಂಪಸ್ ಸಂದರ್ಶನ, ಸ್ವ-ಉದ್ಯೋಗಕ್ಕೆ ಒತ್ತು ಕೊಡುವುದರ ಜತೆಗೆ ಪ್ರತ್ಯೇಕ ಉದ್ಯೋಗ ನೀತಿಯನ್ನೇ ರಾಜ್ಯದಲ್ಲಿ ರೂಪಿಸಲಾಗಿದೆ ಎಂದರು.

ನೃಪತುಂಗ ವಿ.ವಿ.ಗೆ ಕೇಂದ್ರ ಸರ್ಕಾರವು 55 ಕೋಟಿ ರೂ. ಅನುದಾನ ಮಂಜೂರು ಮಾಡಿದೆ. ಇದಕ್ಕೆ ಅಗತ್ಯವಿರುವ ಬಾಕಿ ಹಣವನ್ನು ರಾಜ್ಯ ಸರ್ಕಾರ ಒದಗಿಸಲಿದೆ. ಕಾಲದ ಜತೆಯಲ್ಲಿ ಬದಲಾವಣೆಗೆ ತೆರೆದುಕೊಳ್ಳದೇ ಹೋದರೆ ಅವಕಾಶಗಳು ಕೈತಪ್ಪಿ ಹೋಗಲಿವೆ. ಹೀಗಾಗಿ, ರಾಜ್ಯದಲ್ಲಿ ಎನ್‌ಇಪಿ ಜಾರಿಗೊಳಿಸುತ್ತಿದ್ದು, ಪೂರ್ವ ಪ್ರಾಥಮಿಕ ಹಂತದಿಂದ ಹಿಡಿದು ಸ್ನಾತಕೋತ್ತರ ಮಟ್ಟದವರೆಗೂ ಇನ್ನುಮುಂದೆ ಸಮಗ್ರ ಪರಿವರ್ತನೆ ಕಾಣಿಸಿಕೊಳ್ಳಲಿದೆ ಎಂದವರು ಹೇಳಿದರು.


## ಶ್ರೀಮತಿ ಸರೋಜಮ್ಮ ನಿಧನ



ದಾವಣಗೆರೆ ನಗರದ ಶಿವಕುಮಾರಸ್ವಾಮಿ ಬಡಾವಣೆ ಮೊದಲನೇ ಹಂತ, ಸೇಂಟ್ ಜಾನ್ಸ್ ಸ್ಕೂಲ್ ಎದುರು ಡೋ. ನಂ.1752ರ ವಾಸಿ, ದಿ॥ ಟಿ.ಇ. ಪರಮೇಶ್ವರಪ್ಪನವರ ಧರ್ಮಪತ್ನಿ

**ಶ್ರೀಮತಿ ಸರೋಜಮ್ಮ**

ಇವರು 03.05.2022ರ ಮಂಗಳವಾರ ರಾತ್ರಿ 8.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಶಿವಕುಮಾರಸ್ವಾಮಿ ಬಡಾವಣೆ ಮೊದಲನೇ ಹಂತ, ಸೇಂಟ್ ಜಾನ್ಸ್ ಸ್ಕೂಲ್ ಎದುರಿಗಿರುವ ಡೋ.ನಂ.1752ರ ನಿವಾಸದಲ್ಲಿ ಬೆಳಿಗ್ಗೆ 11.30ರವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 4.5.2022ರ ಬುಧವಾರ ಮಧ್ಯಾಹ್ನ 2 ಗಂಟೆಗೆ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾ.ಕುಡಿನೀರಕಟ್ಟೆ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು:

**ಡಾ. ಪಿ.ರಾಜೇಶ್, ಡಾ. ಪೂರ್ಣಿಮ ಸುರೇಂದ್ರ ಮತ್ತು ಕುಟುಂಬ ವರ್ಗದವರು, ದಾವಣಗೆರೆ. ಮೊ:98455 68791**

## ಪ್ರಥಮ ಪುಣ್ಯಸ್ಮರಣೆ



**ಲಿಂ॥ ಬೂಸ್ನೂರು ಉಮಾಮಹೇಶ್ವರಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಪತ್ನಿ: ಶ್ರೀಮತಿ ಸುಲೋಚನ
ಮಕ್ಕಳಾದ : ಡಾ॥ ಬಿ.ಯು. ಯೋಗೇಂದ್ರ ಕುಮಾರ್ ಶ್ರೀಮತಿ ಸುಷ್ಮ
ಬಿ.ಯು. ಧೀರೇಂದ್ರ ಕುಮಾರ್ ಶ್ರೀಮತಿ ನಾಗವೇಣಿ
ಬಿ.ಯು. ವೀರೇಂದ್ರ ಕುಮಾರ್ ಶ್ರೀಮತಿ ಮಂಜುಳಾ
ಮೊಮ್ಮಕ್ಕಳಾದ: ನಿರೀಕ್ಷಾ, ಹಿಮಘ್ನ, ಶ್ರೇಷ್ಠಾ, ಅಥರ್ವ, ಶ್ರೀತನ್

## ಶ್ರೀಮತಿ ಅನ್ನಪೂರ್ಣಮ್ಮ ನಿಧನ



ದಾವಣಗೆರೆ ಎಸ್. ಎಸ್. ಬಡಾವಣೆ ಬಾಟ್ಲಿ ಬಿಲ್ಡಿಂಗ್ ಹಿಂಭಾಗದ ವಾಸಿ ಮಡಿಕೆ ನಿಚ್ಚಾಪುರ ಗ್ರಾಮದ ದಿ. ಕೆ.ವಿ. ರಘು ಇವರ ಧರ್ಮಪತ್ನಿ

**ಶ್ರೀಮತಿ ಅನ್ನಪೂರ್ಣಮ್ಮ**

ಅವರು ದಿನಾಂಕ 03.05.2022ರ ಮಂಗಳವಾರ ಮಧ್ಯರಾತ್ರಿ 12.31ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ 04.05.2022ರ ಬುಧವಾರ ಬೆಳಿಗ್ಗೆ 7 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ದಾವಣಗೆರೆ ಎಸ್.ಎಸ್. ಬಡಾವಣೆ, ಬಾಟ್ಲಿ ಬಿಲ್ಡಿಂಗ್ ಹಿಂಭಾಗದ ಮೃತರ ನಿವಾಸದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕಿಡಲಾಗುವುದು. ನಂತರ ಮಧ್ಯಾಹ್ನ ಹರಪನಹಳ್ಳಿ ತಾಲ್ಲೂಕು ಮಡಿಕೆ ನಿಚ್ಚಾಪುರ ಗ್ರಾಮದ ಮೃತರ ತೋಟದಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ. 96114-80655, 96200-27799**


# ತಲಾಕ್-ಎ–ಹಸನ್ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಮನವಿ

(1ನೇ ಪುಟದಿಂದ) ಲಾಗುತ್ತದೆ.ಈ ಅವಧಿಯಲ್ಲಿ ಸಹ ಜೀವನ ಸಾಧ್ಯವಾಗದೇ ಹೋದರೆ, ಮೂರನೇ ತಿಂಗಳಲ್ಲಿ ಮೂರನೇ ಬಾರಿ ತಲಾಕ್ ಹೇಳಿದ ನಂತರ ವಿಚ್ಛೇದನ ಪೂರ್ಣವಾಗುತ್ತದೆ. ಈ ಅವಧಿಯ ಒಳಗೆ ಸಹಜೀವನ ಮುಂದುವರೆಸಿದರೆ ಮೊದಲು ಹೇಳಲಾದ ಎರಡು ತಲಾಕ್‌ಗಳು ರದ್ದಾಗುತ್ತವೆ.

ತಮಗೆ ಈ ರೀತಿಯ ತಲಾಕ್ ನೀಡಲಾಗಿದೆ. ತಲಾಕ್ - ಎ – ಹಸನ್‌ಗೆ ಶರಿಯಾದಲ್ಲಿ ಅವಕಾಶವಿದೆ ಎಂದು ಪೊಲೀಸರು ಹಾಗೂ ಅಧಿಕಾರಿಗಳು ತಮಗೆ ಹೇಳಿದ್ದಾರೆ ಎಂದು ಹೀನಾ ತಿಳಿಸಿದ್ದಾರೆ.

ಮುಸ್ಲಿಮ್ ವೈಯಕ್ತಿಕ ಕಾನೂನು (ಶರಿಯತ್) ಅನ್ವಯ ಕಾಯ್ದೆ, 1937 ತಪ್ಪಾಗಿ ಅನ್ವಯಿಸುವುದರಿಂದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಈ ರೀತಿಯ ತಲಾಕ್‌ಗಳು ಸಂವಿಧಾನದ 14, 15, 21 ಹಾಗೂ 25ರ ಉಲ್ಲಂಘನೆ ಎಂದು ಹೀನಾ ಪರವಾಗಿ ಅರ್ಜಿ ದಾಖಲಿಸಿರುವ ಅಶ್ವನಿ ಕುಮಾರ್ ದುಬೆ ವಾದ ಮಂಡಿಸಿದ್ದಾರೆ.

ಹಲವಾರು ಇಸ್ಲಾಮಿಕ್ ದೇಶಗಳು ಈ ರೀತಿಯ ತಲಾಕ್ ಪದ್ಧತಿ ನಿರ್ಬಂಧಿಸಿವೆ. ಆದರೆ, ಭಾರತೀಯ ಸಮಾಜದಲ್ಲಿ ಈ ರೀತಿಯ ಪದ್ಧತಿ ಮುಂದುವರೆದಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಈ ಪದ್ಧತಿಯಿಂದ ಮಹಿಳೆಯರು ಹಾಗೂ ಮಕ್ಕಳ ಮೇಲೆ ಅದರಲ್ಲೂ ಆರ್ಥಿಕವಾಗಿ ದುರ್ಬಲವಾಗಿರುವವರ ಮೇಲೆ ಕರಾಳ ಪರಿಣಾಮವಾಗುತ್ತಿದೆ ಎಂದು ಅರ್ಜಿದಾರರು ಹೇಳಿದ್ದಾರೆ.

# ಸ್ವಸ್ಥ ಸಮಾಜಕ್ಕೆ ಸರಳ ಸೂತ್ರಗಳನ್ನು ಕೊಟ್ಟವರು ಶರಣರು



## ಕಸಾಪ ದತ್ತಿ ಉಪನ್ಯಾಸದಲ್ಲಿ ಎಚ್.ಬಿ. ಮಂಜುನಾಥ್

ದಾವಣಗೆರೆ, ಮೇ 3- ಅತೃಪ್ತಿ, ಅಸಮಾನತೆ, ಅಶಾಂತಿ, ಅರಾಜಕತೆ ಎಲ್ಲವಕ್ಕೂ ಭಯ, ಶೋಕ, ಮೋಹಗಳೇ ಕಾರಣವಾಗಿದ್ದು, ಇದರ ನಿವಾರಣೆಗೆ ಅನಾದಿ ಕಾಲದಿಂದಲೂ ಎಷ್ಟೇ ಚಿಂತನೆಗಳಿದ್ದರೂ, ತಿಳಿಗನ್ನಡದಲ್ಲಿ ಸರಳವಾಗಿ ಪರಿಹಾರ ಹೇಳಿದವರು ಬಸವಾದಿ ಶರಣರು ಎಂದು ಹಿರಿಯ ಪತ್ರಕರ್ತ ಎಚ್.ಬಿ.ಮಂಜುನಾಥ ಅಭಿಪ್ರಾಯಪಟ್ಟರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕನ್ನಡ ಲೇಖಕಿಯರ ಸಂಘ ಇವರ ಸಹಯೋಗದಲ್ಲಿ ಏರ್ಪಾಡಾಗಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಬಸವಣ್ಣನವರ ವೈಚಾರಿಕತೆ ಹಾಗೂ ಮಾನವೀಯತೆ' ವಿಷಯ ವಾಗಿ ಅವರು ವಿಶೇಷ ಉಪನ್ಯಾಸ ನೀಡಿದರು.

ಬಸವಣ್ಣನವರು 'ಆತ್ಮೋದ್ಧಾರ' ಅಂದರೆ ಮನೋವಿಕಾರಗಳನ್ನು ದೂರ ಮಾಡಿಕೊಂಡು ಪರಿಶುದ್ಧ ಆತ್ಮನಾಗುವುದು, 'ಸಮ ಸಮಾಜ' ಅಂದರೆ ಜಾತಿ, ಮತ, ಲಿಂಗ, ವರ್ಗ ಭೇದ ರಹಿತವಾಗಿ ಬಾಳುವುದು. 'ಕಾಯಕ' ಎಂದರೆ ಪ್ರಾಮಾಣಿಕತೆಯಿಂದ ದುಡಿಯುವುದು, 'ದಾಸೋಹ' ಎಂದರೆ ದುಡಿದಿದ್ದನ್ನು ಹಂಚಿ ತಿನ್ನುವುದು. ಇವುಗಳ ಪ್ರಾಮಾಣಿಕ ಪಾಲನೆ ಯಿಂದ ಜಗತ್ತು ಭಯ, ಶೋಕ ಮೋಹಾದಿ ಗಳಿಂದ ಮುಕ್ತವಾಗಬಹುದು ಎಂಬುದು ಬಸವಣ್ಣನವರ ಅಭಿಪ್ರಾಯವಾಗಿತ್ತು ಎಂದರು.

ಜಿಲ್ಲಾ ಕನ್ನಡ ಲೇಖಕಿಯರ ಸಂಘದ ಅಧ್ಯಕ್ಷರಾದ ಶ್ರೀಮತಿ ವೀಣಾ ಕೃಷ್ಣಮೂರ್ತಿ ಯವರ ನಿವಾಸದಲ್ಲಿ ಏರ್ಪಾಡಾಗಿದ್ದ ಉಪನ್ಯಾಸ ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸಾಹಿತಿ ಕೆ.ಎನ್. ಸ್ವಾಮಿ ನೆರವೇರಿಸಿದರು.

ಪ್ರಾಸ್ತಾವಿಕ ನುಡಿಗಳನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಪ್ರಸ್ತುತಪಡಿಸಿದರು.

ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮಿಗಳ ಸಾನ್ನಿಧ್ಯದಲ್ಲಿ ದಾವಣಗೆರೆ ತಾಲ್ಲೂಕು ಕಸಾಪ ಅಧ್ಯಕ್ಷೆ ಶ್ರೀಮತಿ ಸುಮತಿ ಜಯಪ್ಪ, ಮಾಜಿ ಮೇಯರ್ ಅಜಯ್ ಕುಮಾರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಕ.ಸಾ.ಪ.ದ ದಿಳ್ಯಪ್ಪ, ಮಲ್ಲಮ್ಮ, ಆವರಗೆರೆ ರುದ್ರಮುನಿ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದಾಗಿನಕಟ್ಟೆ ಪರಮೇಶ್ವರಪ್ಪ, ಜಗದೀಶ್ ಕೂಲಂಬಿ ಕಾರ್ಯಕ್ರಮ ನಿರೂಪಿಸಿದರು, ಉಮಾದೇವಿ ವಚನ ಹಾಡಿದರು. ಕೋಟೆ ಹಾಳು ಬಸಮ್ಮ ಹಂಪೋಳ್ ಶಿವಪ್ಪ, ಹೆಚ್. ಎಸ್. ಬಸವರಾಜ್, ಶಕುಂತಲಾ ಶಂಭುಲಿಂಗಪ್ಪ, ಬಸಪ್ಪ ನೆಸ್ವಿ, ಸಂಗನಬಸವ ನೆಸ್ವಿ, ಕತ್ತಲಗೆರೆ ಮಲ್ಲಮ್ಮ ಗೌಡರ ಜಯದೇವಪ್ಪ ಹಾಗೂ ಸುಧಾ ಮತ್ತು ಜೆ.ಬಿ. ರಾಜ್ ಇವರುಗಳ ದತ್ತಿಗಳಿಂದ ಕಾರ್ಯಕ್ರಮ ಏರ್ಪಾಡಾಗಿತ್ತು.

# ಸಾಮಾಜಿಕ ಕ್ರಾಂತಿಯ ರೂವಾರಿ ಬಸವಣ್ಣ : ಶಾಸಕ ರಾಮಚಂದ್ರ



ಜಗಳೂರು, ಮೇ 3- ಹನ್ನೆರಡನೇ ಶತಮಾನದ ಶ್ರೇಷ್ಠ ಸಮಾಜ ಸುಧಾರಕರು, ರಾಜ್ಯದಲ್ಲಿ ನಡೆದ ಸಾಮಾಜಿಕ ಕ್ರಾಂತಿಯ ರೂವಾರಿ ಬಸವಣ್ಣನವರ ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿ ಕೊಳ್ಳಬೇಕು ಎಂದು ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ಪಟ್ಟಣದಲ್ಲಿ ಇಂದು ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ವಿಶ್ವಗುರು ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಸಮಾರಂಭದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಬಸವಣ್ಣನವರ ಜನ್ಮ ದಿನವಾದ ಬಸವ ಜಯಂತಿಯನ್ನು ಎಲ್ಲ ಸಮಾಜದ ಮುಖಂಡರೊಂದಿಗೆ ಆಚರಿಸಲಾಗುತ್ತದೆ. ಬಸವ ಜಯಂತಿಯು ಸರ್ವಧರ್ಮೀಯರ ಅತ್ಯಂತ ಪ್ರಮುಖ ಹಬ್ಬ. ಕರ್ನಾಟಕದಾದ್ಯಂತ ಇದನ್ನು ಬಹಳ ವೈಭವ ಹಾಗೂ ಉಲ್ಲಾಸದಿಂದ ಆಚರಿಸಲಾಗುತ್ತದೆ ಎಂದರು.

ಸಾಮಾಜಿಕ ಕ್ರಾಂತಿಯ ರೂವಾರಿ ಬಸವಣ್ಣನವರು, ಅಲ್ಲಮಪ್ರಭು, ಅಕ್ಕಮಹಾದೇವಿ, ಮಡಿವಾಳ ಮಾಚಯ್ಯ, ನೂಲಿನ ಚಂದಯ್ಯ, ಮಾದಾರ ಚೆನ್ನಯ್ಯ ಮುಂತಾದ ಶಿವಶರಣರ ಕಾಲದಲ್ಲಿಯೇ ಜೀವಿಸಿದ್ದ ಜಗಜ್ಯೋತಿ ಬಸವಣ್ಣನವರ ಪ್ರಭಾವದ ಕಾರಣ ಆ ಕಾಲವನ್ನು 'ಬಸವ ಯುಗ'ವೆಂದೇ ಕರೆಯುತ್ತಾರೆ. ಎಂದರು

ಹನ್ನೆರಡನೇ ಶತಮಾನದ ಬಹು ದೊಡ್ಡ ಸಮಾಜ ಸುಧಾರಕರು ಬಸವಣ್ಣನವರು. ಮೇಲು-ಕೀಳು, ಜಾತಿ-ಧರ್ಮ, ಮಡಿ-ಮೈಲಿಗೆ ತುಂಬಿದ್ದ ಸಮಯದಲ್ಲಿ ನೊಂದವರ, ದೀನ-ದಲಿತರ ಉದ್ಧಾರಕ್ಕೆ ನಿಂತವರು. ಕೆಳವರ್ಗದವರನ್ನು ಮೇಲ್ವರ್ಗದವರು ಅತ್ಯಂತ ಹೀನಾಯವಾಗಿ ಕಾಣುತ್ತಿದ್ದ ಆ ಅನ್ಯಾಯವನ್ನು ಹೋಗಲಾಡಿಸಲೆಂದೇ ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿಯ ಬೀಜ ಬಿತ್ತಿದರು.

ಅನುಭವ ಮಂಟಪ ನಿರ್ಮಿಸಿದರು. ಅದರಡಿ ಎಲ್ಲ ವರ್ಗದವರನ್ನೂ ಬರ ಮಾಡಿಕೊಂಡರು. ಕಾಯಕವೇ ಕೈಲಾಸ ಎಂದು ಸಾರಿ, ಪ್ರತಿಯೊಬ್ಬರಲ್ಲೂ ದುಡಿದು ತಿನ್ನುವ ಹುಮ್ಮಸ್ಸು ತುಂಬಿದರು. ಎಲ್ಲರಲ್ಲೂ ಸಹೋದರತ್ವದ ಸಂದೇಶ ಸಾರಿದರು ಬಸವಣ್ಣನವರು ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ದಂಡಾಧಿಕಾರಿ ಸಂತೋಷ್, ಪ.ಪಂ. ಅಧ್ಯಕ್ಷ (5ನೇ ಪುಟಕ್ಕೆ)



# ಬಿಜೆಪಿ ಜಿಲ್ಲಾ ಎಸ್ಸಿ ಮೋರ್ಚಾ ಕಾರ್ಯಕಾರಿಣಿ

ದಾವಣಗೆರೆ, ಮೇ 3- ಭಾರತೀಯ ಜನತಾ ಪಾರ್ಟಿ ಜಿಲ್ಲಾ ಎಸ್ಸಿ ಮೋರ್ಚಾ ಕಾರ್ಯಕಾರಿಣಿ ಎನ್. ಹನುಮಂತನಾಯ್ಕ ಅವರ ಅಧ್ಯಕ್ಷತೆಯಲ್ಲಿ ನಗರದ ಜಿಲ್ಲಾ ಬಿಜೆಪಿ ಕಚೇರಿ ಸಭಾಂಗಣದಲ್ಲಿ ನಡೆಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಪ್ರಧಾನ ಕಾರ್ಯದರ್ಶಿ ಬಿ. ಎಸ್. ಜಗದೀಶ್, ಮಾಯಕೊಂಡ ಶಾಸಕ ಪ್ರೊ. ಎನ್. ಲಿಂಗಣ್ಣ, ಅಣಬೇರು ಜೀವನಮೂರ್ತಿ, ಪ್ರಭಾರಿ ಈಶಪ್ಪ ಹಿರೇಮಣಿ, ಮಾಜಿ ಶಾಸಕ ಎಂ. ಬಸವರಾಜನಾಯ್ಕ, ಗಂಗಾಧರ, ಅಂಜಿನಪ್ಪ, ಮಂಡಳ ಅಧ್ಯಕ್ಷ ದೇವೇಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

# ನಗರಾದ್ಯಂತ ಸಡಗರ ಸಂಭ್ರಮದ ರಂಜಾನ್

(1ನೇ ಪುಟದಿಂದ) ಮುಲ್ ಮುಸ್ಲಿಂ ಮೀನ್ ಫಂಡ್ ಅಸೋಸಿಯೇಷನ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪಿ.ಬಿ. ರಸ್ತೆ ಈದ್ಗಾದಲ್ಲಿ ಮೌಲಾನಾ ಇಲಿಯಾಜ್ ಖಾದ್ರಿಯವರು ಹಬ್ಬದ ಪ್ರಾರ್ಥನೆಯನ್ನು ಬೋಧಿಸಿ ರಂಜಾನ್ ಹಬ್ಬವು ಸಮಸ್ತ ಬಾಂಧವರಿಗೆ ಸುಖ-ಶಾಂತಿ ಸಮೃದ್ಧಿ ನೀಡಲಿ ಎಂದು ಆಶಿಸಿ, ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ದುಶ್ಚಟಗಳಿಂದ ದೂರ ಇರಲು ಪೋಷಕರಿಗೆ ಕರೆ ನೀಡಿದ ಮೌಲಾನಾ, ದೇಶಾದ್ಯಂತ ಶಾಂತಿ, ಸೌಹಾರ್ದತೆ ನೆಲೆಸಲಿ ಎಂದು ದುವಾ ಮಾಡಿದರು.

ಇದೇ ಸಂದರ್ಭದಲ್ಲಿ ಈದ್ಗಾಕ್ಕೆ ಭೇಟಿ ನೀಡಿದ ಜಿಲ್ಲಾ ರಕ್ಷಣಾಧಿಕಾರಿ ರಿಷ್ಯಂತ್ ಅವರು ಸಮಸ್ತ ಮುಸ್ಲಿಂ ಬಾಂಧವರಿಗೆ ಶುಭಾಶಯ ಕೋರಿದರು. ತಂಜೀಮ್ ಸಮಿತಿಯ ಮಾಜಿ ಅಧ್ಯಕ್ಷ ಸಾಧಿಕ್ ಪೈಲ್ವಾನ್, ಸಲಹಾ ಸಮಿತಿಯ ಅಬ್ದುಲ್ ಗನಿ ಅಯೂಬ್ ಪೈಲ್ವಾನ್ ಸೇರಿದಂತೆ ಫಿರಾಜ್, ಮುಸ್ಲಿಂ ಮುಖಂಡರು, ಮಹಾನಗರಪಾಲಿಕೆ ಸದಸ್ಯರು ಉಪಸ್ಥಿತರಿದ್ದರು.

ನಗರದ ಮೂರು ಈದ್ಗಾಗಳನ್ನು ಹೊರತುಪಡಿಸಿ ನಗರದ ಆಯಾ ಪ್ರದೇಶದಲ್ಲಿರುವ ಮಸೀದಿಗಳಲ್ಲಿಯೂ ಸಹ ಹಬ್ಬದ ನಮಾಜ್ ಸಲ್ಲಿಸಲಾಯಿತು.

# ಬದಲಾವಣೆ ಇಲ್ಲ

(1ನೇ ಪುಟದಿಂದ) ಗಳಿಸುತ್ತೇವೆ ಎಂದು ತಿಳಿಸಿದ್ದಾರೆ. ಚುನಾವಣಾ ಅಭಿಯಾನದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನಿಮ್ಮ ಜೊತೆಗಿರುತ್ತಾರೆ ಎಂದೂ ಬೊಮ್ಮಾಯಿಗೆ ಅಮಿತ್ ಷಾ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಮೇ 10ರ ಒಳಗೆ ಸಂಪುಟ ವಿಸ್ತರಣೆ ಕುರಿತ ಪಟ್ಟಿ ರವಾನಿಸುವುದಾಗಿ ಷಾ ತಿಳಿಸಿದ್ದಾರೆ. ಸಂಪುಟ ಪುನರ್‌ರಚನೆ ಸಣ್ಣ ಸ್ವರೂಪದ್ದಾಗಿರಲಿದ್ದು, ಏಳು ಹೊಸ ಮುಖಗಳಿಗೆ ಅವಕಾಶ ದೊರೆಯುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.





# ಹರಿಹರದಲ್ಲಿ ಸಂಭ್ರಮದ ರಂಜಾನ್ ಆಚರಣೆ

ಹರಿಹರ, ಮೇ 3- ಪವಿತ್ರ ರಂಜಾನ್ ಹಬ್ಬವನ್ನು ಮುಸಲ್ಮಾನ ಬಾಂಧವರು ತಾಲ್ಲೂಕಿನಾದ್ಯಂತ ಮಂಗಳವಾರ ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ಬೆಳಿಗ್ಗೆ ಅಹ್ಲೆ ಸುನ್ನತ್ ಪಂಗಡದವರು ಅಂಜುಮನ್ ಶಾಲೆ ಬಳಿಯ ಈದ್ಗಾ ಮೈದಾನದಲ್ಲಿ, ಅಹ್ಲೆ ಹದೀಸ್ ಪಂಗಡದವರು ಜೈಭೀಮನಗರ ಸಮೀಪದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ನಂತರ ಪ್ರವಚನ ನೀಡಿದ ಧರ್ಮ ಗುರುಗಳು, ಉಪವಾಸಗಳು ಹಸಿವೆ ಮತ್ತು ಬಾಯಾರಿಕೆಯನ್ನು ಕೊಡುತ್ತದೆ.

ಉಪವಾಸಗಳ ಮೂಲಕ ಇನ್ನೊಬ್ಬರ ಹಸಿವೆ, ಬಾಯಾರಿಕೆ ನಮ್ಮ ಅನುಭವಕ್ಕೆ ಬರಬೇಕು. ಇನ್ನೊಬ್ಬನ ಹಸಿವು ದಾಹವನ್ನು ಸ್ವಯಂ ಅನುಭವಿಸಿಕೊಂಡು ಇತರರಿಗೆ ಸಹಾಯ ಹಸ್ತ ಚಾಚಬೇಕೆಂದು ಉಪವಾಸಗಳ ತಿರುಳಾಗಿದೆ ಎಂದರು.

ನಗರಸಭಾ ಸದಸ್ಯರಾದ ಜಾವೀದ್ ಆರ್. ಸಿ., ಎಂ.ಎಸ್.ಬಾಬುಲಾಲ್, ಮದ್ದಿ ಮನ್ಸೂರ್, ಅಲ್ತಾಫ್, ದಾದಾಪೀರ್ ಭಾನುವಳ್ಳಿ, ಅಂಜುಮನ್ ಅಡ್ ಹಾಕ್ ಸಮಿತಿ ಪದಾಧಿಕಾರಿಗಳಾದ ಬಿ.ಮೊಹ್ಮದ್ ಫೈರೋಜ್, ಬಿ.ಮೊಹ್ಮದ್ ಸಿಗ್ಬತ್ ಉಲ್ಲಾ, ಸೈಯದ್ ಆಸಿಫ್ ಜುನೈದಿ, ಇಮ್ತಿಯಾಜ್ ಕರೇಕಟ್ಟೆ, ಮುನೀರ್ ಅಹ್ಮದ್, ನೂರ್ ಅಹ್ಮದ್, ರಸೂಲ್ ಖುರೇಶಿ, ಜಫ್ರುಲ್ಲಾ ಕನವಳ್ಳಿ, ಅತಾಉಲ್ಲಾ, ಹುರುಕಡ್ಲಿ ಸೈಯದ್ ಅಬ್ಬಾಸ್ ಅಲಿ, ಎಂ.ಎಸ್.ಜಬಿಉಲ್ಲಾ, ಇಸ್ಮಾಯಿಲ್ ಸಾಬ್ ಹಾಗೂ ಇತರರಿದ್ದರು.

ಶಾಸಕರಾದ ಎಸ್.ರಾಮಪ್ಪ, ಮಾಜಿ ಶಾಸಕರಾದ ಎಚ್.ಎಸ್.ಶಿವಶಂಕರ್, ಮುಖಂಡ ರಾದ ಶ್ರೀನಿವಾಸ್ ನಂದಿಗಾವಿ, ಬಿ.ರೇವಣಸಿದ್ದಪ್ಪ, ಸಿ.ಎನ್.ಹುಲಿಗೇಶ್ ಹಾಗೂ ಇತರರು ಈದ್ಗಾ ಮೈದಾನದಲ್ಲಿ ಹಬ್ಬದ ಶುಭಾಶಯ ಕೋರಿದರು.

ಹರಿಹರದ ಜೈಭೀಮನಗರದ ಈದ್ಗಾ ಮೈದಾನದಲ್ಲಿ ಮಂಗಳವಾರ ಈದ್ ಉಲ್ ಫಿತ್ರ್ ಹಬ್ಬದ ನಿಮಿತ್ತ ಆಯೋಜಿಸಿದ್ದ ಸಾಮೂಹಿಕ ಪ್ರಾರ್ಥನೆಯಲ್ಲಿ ನೂರಾರು ಮಹಿಳೆಯರು ಭಾಗವಹಿಸಿದ್ದರು.

# ಹರಪನಹಳ್ಳಿ; ರಂಜಾನ್ ಸಂಭ್ರಮ



ಹರಪನಹಳ್ಳಿ, ಮೇ 3- ಮುಸ್ಲಿಂ ಬಾಂಧವರು ಶ್ರದ್ಧಾ ಭಕ್ತಿಯಿಂದ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಪಟ್ಟಣದ ಮೂರೂ ಕಡೆಗಳಲ್ಲಿ ಸಾಮೂಹಿಕ ಪ್ರಾರ್ಥನೆ ನೆರವೇರಿಸುವ ಮೂಲಕ ರಂಜಾನ್ ಹಬ್ಬದ ಮೆರಗು ಹೆಚ್ಚಿಸಿದರು.

ಹೊಸಪೇಟೆ ರಸ್ತೆಯ ತರಳಬಾಳು ಕಲ್ಯಾಣ ಮಂಟಪ ಹಿಂಭಾಗದ ದರ್ಗಾದಲ್ಲಿ ಆಲಿ ಆದೀಸ್ ಪಂಗಡದ ಮುಸ್ಲಿಂ ಬಾಂಧವರು ಬೆಳಗ್ಗೆ 8.30ಕ್ಕೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಹಡಗಲಿ ರಸ್ತೆಯ ದರ್ಗಾದಲ್ಲಿ ಅಲಿ ಸುನ್ನಿ ಪಂಗಡದವರು 10 ಗಂಟೆಗೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಎಚ್.ಪಿ.ಎಸ್ ಕಾಲೇಜು ಹಿಂಭಾಗ ಹಕ್ ಸಮಿತಿ ಯವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಪವಿತ್ರ ರಂಜಾನ್ ಹಿನ್ನೆಲೆಯಲ್ಲಿ ಸಾವಿರಾರು ಮುಸ್ಲಿಂ ಮಹಿಳೆಯರೂ ಸಹ ಸಾಮೂಹಿಕ ಪ್ರಾರ್ಥನೆ ನೆರವೇರಿಸಿದರು. ಇದಕ್ಕಾಗಿ ಹೊಸಪೇಟೆ ರಸ್ತೆಯ ಈದ್ಗಾ ಮೈದಾನದಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿತ್ತು. ಬೆಳಗ್ಗೆ 8 ಗಂಟೆ ವೇಳೆಗೆ ಒಂದೆಡೆ ಜಮಾಯಿಸಿದ ಮುಸ್ಲಿಂ ಮಹಿಳೆಯರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಹಬ್ಬದ ಶುಭ ಕೋರಿದರು.

ರಂಜಾನ್ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗೆಯಿಂದಲೇ ಮಕ್ಕಳು, ಮೊಮ್ಮಕ್ಕಳು, ಸ್ನೇಹಿತರು, ಸಂಬಂಧಿಗಳೊಂದಿಗೆ ಮಸೀದಿಗಳಿಗೆ ತೆರಳಿದ ಮುಸ್ಲಿಮರು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಇದಾದ ಬಳಿಕ ಶುಭಾಶಯ ವಿನಿಮಯ ಮಾಡಿಕೊಂಡರು. ನಂತರ ಬಡವರಿಗೆ ಬಟ್ಟೆ, ಆಹಾರ ಸಾಮಗ್ರಿ, ಹಣವನ್ನು ದಾನವಾಗಿ ನೀಡಿದರು. ಪಟ್ಟಣದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆದ ಹಡಗಲಿ ರಸ್ತೆ, ಹೊಸಪೇಟೆ ರಸ್ತೆಯ ಈದ್ಗಾ ಮೈದಾನಗಳ ಸುತ್ತ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಖಾಜಿ ಮುಸ್ತಾಕ್ ಆಮದ್ ರಜ್ವಿ, ಪುರಸಭೆ ಸದಸ್ಯ ಜಾಕೀರ ಸರ್ಕಾವಸ್, ಡಿ.ಅಬ್ದುಲ್ ರೆಹಮಾನ್, ಲಾಟಿ ದಾದಾಪೀರ್, ಎಂ.ಕೆ.ಜಾವೀದ್, ಮಾಜಿ ಸದಸ್ಯರಾದ ಸಿ.ಜಾವೇದ್ ಎಂ.ಜಾಫರ್ ಸಾಬ್, ಸಿ.ಸಲಾಂಸಾಬ್, ಎ.ಮೂಸಾಸಾಬ್, ಎಸ್.ಕೆ ಖಾಲೀದ್, ಗುತ್ತಿಗೆದಾರ ಸತ್ತಾರಸಾಬ್, ರಾಜು ಚಕ್ಕಲಿ, ಇಸ್ಮಾಯಿಲ್ ಎಲಿಗಾರ, ಮೌಲಾನಾ ಪೀರ್‌ಸಾಬ್, ಇರ್ಷಾದ್ ಬಾಷಾ, ಮಾಬೂಷಾ, ಬಿ.ಶೇಕ್ಸಾವಲಿ, ರಾಜಾಸಾಬ್, ಜಬೀಲ್ ಸಾಬ್, ಎಂ.ಅಲ್ಲಾಭಕ್ಷಿ, ಸೇರಿದಂತೆ ಇತರರು ಇದ್ದರು.

# ಮಕ್ಕಳ ಕೊರೊನಾ ಲಸಿಕೆ ತಡೆಗೆ ಸುಪ್ರೀಂ ನಕಾರ

(1ನೇ ಪುಟದಿಂದ) 1,739 ಮಕ್ಕಳಲ್ಲಿ ಸಣ್ಣ ಅಡ್ಡಪರಿಣಾಮ, 81 ಮಕ್ಕಳಲ್ಲಿ ತೀವ್ರ ಹಾಗೂ ಆರು ಮಕ್ಕಳಲ್ಲಿ ಗಂಭೀರ ಅಡ್ಡ ಪರಿಣಾಮಗಳು ಕಂಡು ಬಂದಿವೆ ಎಂದು ತಿಳಿಸಿತ್ತು.

ಪರಿಣಿತರ ಅಭಿಪ್ರಾಯದ ಖಚಿತತೆಯನ್ನು ನ್ಯಾಯಾಲಯ ಪರಿಶೀಲಿಸಲು ಹೋಗುವುದು ನಮ್ಮ ಅಧಿಕಾರ ವ್ಯಾಪ್ತಿಗೆ ಮೀರಿದ್ದು ಹಾಗೂ ಅಪಾಯಕಾರಿಯೂ ಆಗಿದೆ. ಈ ವಿಷಯದಲ್ಲಿ ನ್ಯಾಯಾಲಯ ದುಸ್ಸಾಹಸಕ್ಕೆ ಮುಂದಾಗ ಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ರಾಹುಲ್ ನೈಟ್‌ಕ್ಲಬ್ ವಿಡಿಯೋಗೆ ಸಮರ್ಥನೆ

ನವದೆಹಲಿ, ಮೇ 3 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನೇಪಾಳದ ನೈಟ್‌ಕ್ಲಬ್ ಒಂದಕ್ಕೆ ತೆರಳಿರುವುದು ರಾಜಕೀಯ ಕೋಲಾಹಲಕ್ಕೆ ಕಾರಣವಾಗಿದೆ.

ರಾಹುಲ್ ಕ್ಲಬ್ ಭೇಟಿ ಸಮರ್ಥಿಸಿಕೊಂಡಿರುವ ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ, ರಾಹುಲ್ ಗಾಂಧಿ ಖಾಸಗಿ ಮದುವೆಯೊಂದರಲ್ಲಿ ಪಾಲ್ಗೊಳ್ಳಲು ನೇಪಾಳಕ್ಕೆ ತೆರಳಿದ್ದಾರೆ. ಅವರೇನು ಆಹ್ವಾನವಿಲ್ಲದೇ ಹೋಗಿಲ್ಲ ಎಂದಿದ್ದಾರೆ.

**ಆಹ್ವಾನದ ಮೇಲೆ ಮದುವೆಗೆ ತೆರಳಿದ್ದಾರೆ ಎಂದ ಸುರ್ಜೇವಾಲಾ**

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ನವಾಜ್ ಷರೀಫ್ ಅವರ ಜನ್ಮ ದಿನಕ್ಕೆ ಆಹ್ವಾನವಿಲ್ಲದೇ ತೆರಳಿದ ರೀತಿಯಲ್ಲಿ ರಾಹುಲ್ ಗಾಂಧಿ ಹೋಗಿಲ್ಲ. ನೇಪಾಳದ ಸ್ನೇಹಿತರೊಬ್ಬರ ಖಾಸಗಿ ಮದುವೆ ಸಮಾರಂಭದಲ್ಲಿ ಪಾಲ್ಗೊಳ್ಳಲು ರಾಹುಲ್ ಗಾಂಧಿ ಸ್ನೇಹಿತ ದೇಶವಾದ ನೇಪಾಳಕ್ಕೆ ತೆರಳಿದ್ದಾರೆ ಎಂದು ಸುರ್ಜೇವಾಲಾ ತಿಳಿಸಿದ್ದಾರೆ.

ಕುಟುಂಬದವರು ಹಾಗೂ ಸ್ನೇಹಿತರ ಮದುವೆಯಲ್ಲಿ ಪಾಲ್ಗೊಳ್ಳುವುದು ಅಪರಾಧವಲ್ಲ. ಮದುವೆ ಹಾಗೂ ನಿಶ್ಚಿತಾರ್ಥಗಳಲ್ಲಿ ಪಾಲ್ಗೊಳ್ಳುವುದು ನಮ್ಮ ಸಂಸ್ಕೃತಿ ಹಾಗೂ ನಾಗರಿಕತೆ ಎಂದಿದ್ದಾರೆ.

ಮದುವೆಯಾಗುವುದು, ಸ್ನೇಹಿತರಾಗುವುದು ಇಲ್ಲವೇ ಅವರ ಮದುವೆಯಲ್ಲಿ ಪಾಲ್ಗೊಳ್ಳುವುದು ಈ ದೇಶದಲ್ಲಿ ಇನ್ನೂ ಅಪರಾಧವಲ್ಲ. ಮುಂದೊಂದು ದಿನ ಪ್ರಧಾನ ಮಂತ್ರಿ ಮೋದಿ ಇಲ್ಲವೇ ಬಿಜೆಪಿ ನಿರ್ಧರಿಸಿದರೆ ಮದುವೆಯಲ್ಲಿ ಪಾಲ್ಗೊಳ್ಳುವುದು ಅಪರಾಧ ಆಗಬಹುದು ಎಂದೂ ಸುರ್ಜೇವಾಲಾ ಹೇಳಿದ್ದಾರೆ.

ರಾಹುಲ್ ಗಾಂಧಿ ಸೋಮವಾರದಂದು ನೇಪಾಳಕ್ಕೆ ಐದು ದಿನಗಳ ಭೇಟಿಗಾಗಿ ತೆರಳಿದ್ದಾರೆ. ಕಠ್ಮಂಡು ಪೋಸ್ಟ್ ಪತ್ರಿಕೆಯ ಪ್ರಕಾರ ನೇಪಾಳಿ ಸ್ನೇಹಿತ ಸುಮ್ನಿಮಾ ಉದಾಸ್ ಅವರ ಮದುವೆಯಲ್ಲಿ (5ನೇ ಪುಟಕ್ಕೆ)

# ಹಿಂದೂ ಹೆಸರಿನಲ್ಲಿ ಸ್ವಾಸ್ಥ್ಯ ಕೆಡಿಸುವ ಕೆಲಸ

## ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಎನ್.ಇ. ನಟರಾಜ್

ದಾವಣಗೆರೆ, ಮೇ 3 - ಮನಸ್ಮೃತಿ ಇಟ್ಟುಕೊಂಡು ಪಾತಾಳಕ್ಕೆ ತುಳಿಯಲ್ಪಟ್ಟವರನ್ನು, ಬಸವಣ್ಣನವರು ಮೇಲೆತ್ತಿ ಭೂಮಿಯ ಮೇಲೆ ತಂದರು. ಆದರೆ, ಇಂದು ಅದೇ ಮನುಸ್ಮೃತಿಯ ವಿಕೃತಿ ಮತ್ತೆ ಮೆರೆಯುತ್ತಿದೆ ಎಂದು ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಎನ್.ಇ. ನಟರಾಜ್ ವಿಷಾದಿಸಿದ್ದಾರೆ.



**ಹಿಂದೂ ಅನ್ನುವ ಪದದಿಂದ ಮನುಸ್ಮೃತಿ ಇಟ್ಟುಕೊಂಡು ಪಾತಾಳಕ್ಕೆ ತುಳಿಯಲಾಯಿತು. ಅಂತಹವರನ್ನು ಬಸವಣ್ಣ ಪಾತಾಳದಿಂದ ಎತ್ತಿದರು. ಆದರೆ, ಅವರೇ ಇಂದು ಬಸವಣ್ಣನವರು ಹೇಳಿದ ರೀತಿ ಬಾಳುತ್ತಿಲ್ಲ.**
**- ಎನ್.ಇ. ನಟರಾಜ್, ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ**

ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ, ವಿನೂತನ ಮಹಿಳಾ ಸಮಾಜ, ಜಿಲ್ಲಾ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತುಗಳ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಆಯೋಜಿಸಲಾಗಿದ್ದ 'ಬಸವ ಜಯಂತಿ ಮತ್ತು ವಚನ ವೈಭವ' ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಹಿಂದೂ ಅನ್ನುವ ಪದದಿಂದ ಮನುಸ್ಮೃತಿ ಇಟ್ಟುಕೊಂಡು ಪಾತಾಳಕ್ಕೆ ತುಳಿಯಲಾಯಿತು. ಅಂತಹವರನ್ನು ಬಸವಣ್ಣ ಪಾತಾಳದಿಂದ ಎತ್ತಿದರು. ಆದರೆ, ಇಂದು ಬಸವಣ್ಣನವರು ಹೇಳಿದ ರೀತಿ ಬಾಳುತ್ತಿಲ್ಲ. ಲಿಂಗಾಯತರು ನಾನು ಹಿಂದೂ ಅಲ್ಲ ಎಂದರೆ, ಲಿಂಗಾಯತ ಧರ್ಮದ ಉಳಿದವರು 'ಇವನ್ಯಾರು ಹಿಂದೂ ಅಲ್ಲ ಅಂತಾನೆ?' ಎಂದು ಆಕ್ಷೇಪ ವ್ಯಕ್ತಪಡಿಸುತ್ತಾರೆ ಎಂದರು.

ಹಿಂದೂ ಹೆಸರಿನಲ್ಲಿ ಇಂದು ಕಚ್ಚಾಟಗಳು ನಡೆಯುತ್ತಿವೆ. ಸಮಾಜದ ಸ್ವಾಸ್ಥ್ಯ ಕೆಡಿಸುವ ಕೆಲಸ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಬಸವ ತತ್ವಗಳನ್ನು ಹರಡಬೇಕಿದೆ. ಕ್ರಾಂತಿಕಾರಿ ಜನರು ಬೀದಿಗಳಲ್ಲಿ ನಿಂತು ಬ್ರಿಟಿಷರ ವಿರುದ್ಧ ಹಾಡುತ್ತಿದ್ದರು. ಅದೇ ರೀತಿ ಬಸವ ವಚನಗಳನ್ನು ಗಲ್ಲಿ ಗಲ್ಲಿಗಳಲ್ಲಿ ಹಾಡುವ ಪರಿಸ್ಥಿತಿ ಬಂದಿದೆ ಎಂದರು.

ಬಸವತತ್ವ ಸಂಪೂರ್ಣ ಜಾರಿಯಾದರೆ ರಾಜಕಾರಣಕ್ಕೆ ಅವಕಾಶವೇ ಇರುವುದಿಲ್ಲ. ಹೀಗಾಗಿ ರಾಜಕಾರಣಿಗಳು ಮೇಲು ಹಂತಕ್ಕೆ ಮಾತ್ರ ಬಸವ ತತ್ವ ಸ್ಮರಿಸುತ್ತಾರೆ. ಸಂಪೂರ್ಣವಾಗಿ ಬಸವಣ್ಣನ ಪಾಲಿಸುವುದಿಲ್ಲ. ನಮ್ಮನ್ನು ಆಳುವವರು ಬಸವಣ್ಣನನ್ನು ಸಂಪೂರ್ಣವಾಗಿ ಒಪ್ಪಿದ ದಿನ ಬಸವ ಸಮಾಜ ಸಾಧ್ಯವಾಗುತ್ತದೆ ಎಂದು ನಟರಾಜ್ ಹೇಳಿದರು.

ಬಸವ ತತ್ವ ಪ್ರಚಾರಕ ಜಿ.ಬಿ. ಚಂದ್ರಶೇಖರಪ್ಪ ಮಾತನಾಡಿ, ಲಿಂಗಾಯತದ ಮೂಲ ಸತ್ವ ಕಾಯಕವಾಗಿದೆ. ಕಾಯಕ ತತ್ವದಲ್ಲೇ ಭಕ್ತಿ ಮಾರ್ಗ ಬರುತ್ತದೆ. ಕಾಯ - ಕಾಯಕ ಕೈಲಾಸ ಆಗಬೇಕು ಎಂಬುದು ಲಿಂಗಾಯತದ ಆಶಯ ಎಂದು ಹೇಳಿದರು.

ಬಸವಣ್ಣನವರು ತಮ್ಮ ವಚನಗಳಲ್ಲಿ ಸುಳ್ಳು, ಕಳ್ಳತನ, ಕೊಲೆ ಇತ್ಯಾದಿ 7 ಕೃತ್ಯಗಳನ್ನು ಎಸಗದಂತೆ ತಿಳಿಸಿದ್ದರು. ಆದರೆ, ಅದೇ 7 ಸೂತ್ರಗಳನ್ನು ಈಗ ಅನುಸರಿಸುತ್ತಿರುವುದರಿಂದ ಸಮಾಜ ಅವನತಿಯತ್ತ ಸಾಗಿದೆ ಎಂದವರು ವಿಷಾದಿಸಿದರು.

ಯರಗುಂಟೆಯ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ಗದ್ದಿಗೆಮಠದ ಶ್ರೀ ಪರಮೇಶ್ವರ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು.

ಕ.ಸಾ.ಪ. ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಜಿಲ್ಲಾ (4ನೇ ಪುಟಕ್ಕೆ)

# ಎಲ್ಐಸಿ ಷೇರು ಕಡಿಮೆ ಬೆಲೆಗೆ

(1ನೇ ಪುಟದಿಂದ) ಪ್ರಶ್ನಿಸಿದ್ದಾರೆ.

ಈ ವರ್ಷದ ಫೆಬ್ರವರಿಯಲ್ಲಿ ಸರ್ಕಾರ ಹೇಳಿಕೆ ನೀಡಿ ಶೇ.5ರಷ್ಟು ಷೇರುಗಳನ್ನು ಮಾರುವ ಮೂಲಕ 70 ಸಾವಿರ ಕೋಟಿ ರೂ. ಪಡೆಯುವುದಾಗಿ ಹೇಳಿತ್ತು. ಈಗ ಶೇ.3.5ರ ಷೇರು ಮಾರಿ 21 ಸಾವಿರ ಕೋಟಿ ರೂ. ಪಡೆಯುವುದಾಗಿ ಹೇಳುತ್ತಿದೆ ಎಂದಿದ್ದಾರೆ.

ಜಾಗತಿಕ ಹಾಗೂ ದೇಶೀಯ ಹಣಕಾಸು ಮಾರುಕಟ್ಟೆ ತಳಮಳದಲ್ಲಿರುವಾಗ ಸರ್ಕಾರ ಏಕೆ ಎಲ್.ಐ.ಸಿ. ಷೇರುಗಳನ್ನು ಮಾರಲು ಹೊರಟಿದೆ? ಮಾರುಕಟ್ಟೆ ಪರಿಸ್ಥಿತಿ ಸೂಕ್ತವಾಗಿರದೇ ಇದ್ದರೆ ಷೇರುಗಳನ್ನು ಮಾರುವುದಿಲ್ಲ ಎಂದು ಹೂಡಿಕೆ ಹಿಂತೆಗೆತದ ಉಸ್ತುವಾರಿಯಲ್ಲಿರುವ ಕಾರ್ಯದರ್ಶಿ ಹೇಳಿದ್ದರು. ಹೀಗಿರುವಾಗ ಎಲ್.ಐ.ಸಿ.ಯನ್ನು ಏಕೆ ಪ್ರತ್ಯೇಕವಾಗಿ ಪರಿಗಣಿಸಲಾಗುತ್ತಿದೆ? ಎಂದವರು ಕೇಳಿದ್ದಾರೆ.

ಕಳೆದ ಜನವರಿ - ಫೆಬ್ರವರಿಯಲ್ಲಿ ಎಲ್.ಐ.ಸಿ. ಷೇರಿನ ಬೆಲೆ 1,100 ರೂ. ಎಂದು ತಿಳಿಸಲಾಗಿತ್ತು. ಈಗ ಅದರ ಬೆಲೆಯನ್ನು 902-949 ರೂ.ಗಳಿಗೆ ಇಳಿಸಲಾಗಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ 30 ಸಾವಿರ ಕೋಟಿ ರೂ. ನಷ್ಟವಾಗಿದೆ ಎಂದವರು ಹೇಳಿದ್ದಾರೆ.

# ಎಸ್ಸೆಸ್‌ರಿಂದ ಎತ್ತುಗಳಿಗೆ ಪೂಜೆ

(1ನೇ ಪುಟದಿಂದ) ಇಂದು ದುಗ್ಗಾವತಿಯಲ್ಲಿ ಸಾಕಿರುವ ಕಿಲಾರಿ ಎತ್ತುಗಳಿಗೆ ಮಾಜಿ ಸಚಿವರು, ಹಾಲಿ ಶಾಸಕರಾದ ಡಾ|| ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮತ್ತವರ ಪತ್ನಿ ಶ್ರೀಮತಿ ಪ್ರಭಾ ಎಸ್.ಮಲ್ಲಿಕಾರ್ಜುನ್, ಪುತ್ರ ಸಮರ್ಥ, ಪುತ್ರಿ ಶ್ರೇಷ್ಠ, ಪುತ್ರ ಶಿವ ಅವರು ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಡಾ|| ಉದಯಶಂಕರ್, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಜಿ.ಎಸ್.ಮಂಜುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಬಿ.ಕರಿಬಸಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾಗಾನಹಳ್ಳಿ ಪರಶುರಾಮ್, ಕಾಡಜ್ಜಿ ಚಂದ್ರಣ್ಣ, ಹನುಮಂತರಾವ್ ಮತ್ತಿತರರಿದ್ದರು.

# ವಿಶ್ವದಲ್ಲೇ ಮೊದಲ ಬಾರಿ ಬಸವ ಜಯಂತಿ ಪ್ರಾರಂಭಿಸಿದ ಹೆಗ್ಗಳಿಕೆ ದಾವಣಗೆರೆ ವಿರಕ್ತ ಮಠದ್ದು

ಒಂಬೈನೂರು ವರ್ಷಗಳ ಹಿಂದೆ ಪ್ರಜಾಪ್ರಭುತ್ವದ ಪಿತಾಮಹ ವಿಶ್ವಗುರು ಬಸವಣ್ಣನವರು ಜನಿಸಿದ್ದು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯ ಇಂಗಳೇಶ್ವರದಲ್ಲಿ. ವಿಶ್ವದ ಶ್ರೇಷ್ಠ ದಾರ್ಶನಿಕ, ಮಹಾನ್ ಮಾನವತಾವಾದಿ, ಕ್ರಾಂತಿಯೋಗಿ, ಮಹಾತ್ಮನೆಂದು ಇಡೀ ವಿಶ್ವವೇ ಈಗ ಕೊಂಡಾಡುತ್ತಿದೆ. ಪ್ರಜಾತಾಂತ್ರಿಕ ವ್ಯವಸ್ಥೆಯ ಇಂದಿನ ಸಂಸತ್‌ಗೆ ಮಾದರಿ ಎಂಬಂತೆ 12 ನೇ ಶತಮಾನದಲ್ಲಿಯೇ ಅನುಭವ ಮಂಟಪ ಸ್ಥಾಪಿಸಿ ಸಾಮಾಜಿಕ, ಧಾರ್ಮಿಕ ಸಮಾನತೆಗೆ ಶ್ರಮಿಸಿದ ಬಸವಣ್ಣನವರ ಜನ್ಮ ದಿನವನ್ನು ಸರ್ಕಾರದ ವತಿಯಿಂದ ಆಚರಿಸುವ ಜೊತೆಗೆ, ಎಲ್ಲೆಡೆ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಲಂಡನ್‌ನ ಥೇಮ್ಸ್ ನದಿಯ ದಂಡೆಯ ಮೇಲೂ ಬಸವಣ್ಣನವರ ಪ್ರತಿಮೆ ನಿರ್ಮಾಣವಾಗಿ ಅಲ್ಲಿಯೂ ಬಸವ ಜಯಂತಿ ಆಚರಿಸುವ ಕಾರ್ಯ ಶುರುವಾಗಿದೆ. ಈ ಸಾಮಾಜಿಕ ಕ್ರಾಂತಿಕಾರಿ ಬಸವಣ್ಣನವರ ಜಯಂತಿಯನ್ನು ವಿಶ್ವದಲ್ಲೇ ಮೊದಲ ಬಾರಿಗೆ ಪ್ರಾರಂಭಿಸಿದ ಕೀರ್ತಿ ದಾವಣಗೆರೆಯ ವಿರಕ್ತಮಠಕ್ಕೆ ಸಲ್ಲುತ್ತದೆ.

ಶೂನ್ಯಪೀಠ ಪರಂಪರೆಯ ಚಿತ್ರದುರ್ಗ ಮುರುಘಾಮಠದ ಶಾಖಾ ಮಠವಾದ ವಿರಕ್ತಮಠಕ್ಕೂ ಶತಮಾನಗಳ ಇತಿಹಾಸವಿದೆ. ಈ ಮಠದಲ್ಲಿ ದೇಶ ಕಂಡ ಮೊದಲ ಸಾಮಾಜಿಕ ಕ್ರಾಂತಿಕಾರಿ ಬಸವಣ್ಣನವರ ಜಯಂತಿಯನ್ನು 1913 ರಲ್ಲಿ ಮೊದಲ ಬಾರಿ ಆಚರಿಸಲಾಯಿತು. 'ಕರ್ನಾಟಕದ ಗಾಂಧಿ' ಎಂದೇ ಪ್ರಸಿದ್ಧರಾಗಿದ್ದ ಹರ್ಡೇಕರ್ ಮಂಜಪ್ಪ ಅವರು 'ಧನುರ್ಧಾರಿ' ಎಂಬ ಪತ್ರಿಕೆ ಪ್ರಾರಂಭಿಸಿ ಸ್ವಾತಂತ್ರ್ಯ ಚಳುವಳಿಗೆ ತರುಣರನ್ನು ಸಂಘಟಿಸುವ ಕಾರ್ಯದಲ್ಲಿರುತ್ತಾರೆ. ಒಂದು ಸಲ ಜಿನ್ನಿಂಗ್ ಫ್ಯಾಕ್ಟರಿಯ ಕೆಲಸದ ಮೇಲೆ ಮಂಜಪ್ಪನವರು ಬಾಂಬೆಗೆ ಹೋಗುತ್ತಾರೆ.



ವಾರಗಳ ಕಾಲ ಅಲ್ಲಿಯೇ ಇರಬೇಕಾಗುತ್ತದೆ. ಸಂಜೆಯ ಸಮಯದಲ್ಲಿ ಅಲ್ಲಿಯ ಆರ್ಯ ಸಮಾಜಕ್ಕೆ ಭೇಟಿ ನೀಡುತ್ತಾರೆ. ಪ್ರಾರ್ಥನೆ, ಭಜನೆ ನಡೆಯುತ್ತಿರುವುದನ್ನು ನೋಡಿ ಭಾಗಿಯಾಗಿ, ಅವರಿಗೆ ನಮ್ಮ ಮಠಗಳಲ್ಲಿಯೂ ಪ್ರಾರ್ಥನೆ, ಭಜನೆ ಆರಂಭಿಸಬೇಕೆಂಬ ವಿಚಾರ ಹೊಳೆಯುತ್ತದೆ. ದಾವಣಗೆರೆಗೆ ಬಂದ ತಕ್ಷಣವೇ ಹಿರಿಯ ಸಂಗೀತ ಶಿಕ್ಷಕ ನಿಡಗುಂದಿ ಮಡಿವಾಳಪ್ಪನವರನ್ನು ಮಂಜಪ್ಪ ಅವರು ಭೇಟಿ ಮಾಡಿ, ನಮ್ಮ ಮಠಗಳಲ್ಲಿ ಭಜನೆ, ಪ್ರಾರ್ಥನೆ ನಡೆಯಬೇಕೆಂದು ಹೇಳುತ್ತಾರೆ.

ಮಡಿವಾಳಪ್ಪನವರು ದಾವಣಗೆರೆಯ ಪಟ್ಟಣದಲ್ಲಿ ವಿರಕ್ತಮಠವಿದೆ. ಆ ಮಠಕ್ಕೆ ಮೃತ್ಯುಂಜಯ ಅಪ್ಪಗಳು ಮಠಾಧೀಶರಾಗಿದ್ದಾರೆ.ಅವರು ಭಜನಾ ಪ್ರಿಯರು ನೀವು ಹೋಗಿ ಭಿನ್ನವಿಸಿಕೊಳ್ಳಿ ಎಂದು ಸಲಹೆ ನೀಡುತ್ತಾರೆ. ಹರ್ಡೇಕರ್ ಮಂಜಪ್ಪ ಅವರು ನೇರವಾಗಿ ವಿರಕ್ತಮಠಕ್ಕೆ ಬಂದು ಪೂಜ್ಯ ಶ್ರೀ ಮೃತ್ಯುಂಜಯ ಅಪ್ಪಗಳನ್ನು ದರ್ಶನ ಮಾಡಿ, ಈ



ವಿಚಾರವನ್ನು ಪ್ರಸ್ತಾಪಿಸುತ್ತಾರೆ.

ಮೃತ್ಯುಂಜಯ ಅಪ್ಪಗಳು ಅಂದಿನ ಮುರುಘಾ ಮಠದ ಜಗದ್ಗುರುಗಳಾದ ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರೊಂದಿಗೆ ಚರ್ಚಿಸಿ ಅವರ ಮಾರ್ಗದರ್ಶನದಲ್ಲಿ 1911ರ ಜೂನ್ 26 ರಂದು ಭಜನಾ ಸಂಘವನ್ನು ಸ್ಥಾಪಿಸಿ, ಪ್ರತಿ ಸೋಮವಾರ ಮಠದಲ್ಲಿ ಭಜನೆ ಪ್ರಾರಂಭಿಸಲಾಯಿತು.

ಬಸವಣ್ಣನವರ ವಚನಗಳು, ಶರಣರ ಅನುಭಾವ ಗೀತೆಗಳ ಭಜನೆ ಶುರುವಾಯಿತು. ನಂತರ ಶ್ರಾವಣ ಮಾಸ ಬರುತ್ತದೆ. ಪ್ರತಿ ದಿನವೂ ಒಬ್ಬೊಬ್ಬ ಶರಣರ ಚರಿತ್ರೆಯನ್ನು ತಿಳಿಸುವ ಕಾರ್ಯವನ್ನು 1911 ರಲ್ಲಿ 'ಶ್ರಾವಣ ಮಾಸೋಪನ್ಯಾಸ ಮಾಲೆ' ಎಂದು ಒಂದು ತಿಂಗಳ ಕಾಲ ಪ್ರವಚನ ಕಾರ್ಯಕ್ರಮವನ್ನು ಮಂಜಪ್ಪ ಅವರು ಶ್ರೀಮಠದಲ್ಲಿ ಪ್ರಾರಂಭಿಸಿದರು. ಅವರಿಗೆ ಶ್ರೀಮಠದ ಭಕ್ತರಾದ ಕಂಚಿಕೆರೆ ಮಹಾಲಿಂಗಪ್ಪ ಅವರು ಬಸವಣ್ಣನವರ ನೇತೃತ್ವದಲ್ಲಿ ನಡೆದ ಕಲ್ಯಾಣ ಕ್ರಾಂತಿಯ ವಿಚಾರಗಳನ್ನು ತಿಳಿಸುತ್ತಾರೆ.ಬಸವಣ್ಣನವರ ವಚನಗಳನ್ನು ಓದಿ ಪ್ರಭಾವಿತರಾದ ಮಂಜಪ್ಪನವರಿಗೆ ಬಸವಣ್ಣನವರ ಜಯಂತಿಯನ್ನು ಪ್ರಾರಂಭಿಸಬೇಕೆಂಬ ಚಿಂತನೆ ಬರುತ್ತದೆ.

ಹಿಂದೂಗಳು ರಾಮನವಮಿ ಮಾಡುವಂತೆ "ಬಸವ ಜಯಂತಿ" ಪ್ರಾರಂಭಿಸಬೇಕೆಂದು ಮಂಜಪ್ಪ ಅವರು, ಮೃತ್ಯುಂಜಯ ಅಪ್ಪಗಳು, ಶ್ರೀ ಜಯದೇವ ಜಗದ್ಗುರುಗಳೊಂದಿಗೆ ಚರ್ಚಿಸಿ, ದಾವಣಗೆರೆ ವಿರಕ್ತಮಠದಲ್ಲಿ 1913 ರಲ್ಲಿ ಬಸವ ಜಯಂತಿಯನ್ನು ಸಾರ್ವತ್ರಿಕವಾಗಿ ಆಚರಿಸಲು ಪ್ರಾರಂಭಿಸಿದರು.

ನಂತರ ಮೈಸೂರಿನ ಎನ್.ಆರ್. ಕರಿಬಸವ ಶಾಸ್ತ್ರಿಗಳಿಗೆ ಮಂಜಪ್ಪನವರು ಪತ್ರ ಬರೆದು, ಬಸವಣ್ಣನವರ ಜನ್ಮ ದಿನವನ್ನು ತಿಳಿಸಿರೆಂದು ಕೇಳುತ್ತಾರೆ. ಅವರು ಬಸವ ಪುರಾಣ, ಬಸವರಾಜದೇವರ ರಗಳೆಗಳನ್ನು ಅಧ್ಯಯನ ಮಾಡಿ ಸಂಸ್ಕೃತದಲ್ಲಿ ಒಂದು ಶ್ಲೋಕವನ್ನು ಬರೆದು ಕಳಿಸುತ್ತಾರೆ. ಆ ಶ್ಲೋಕದ ಅರ್ಥವನ್ನು ಹರಪನಹಳ್ಳಿಯ ಶಾಂತಪ್ಪಾಜಿ ಅವರು, ಅಕ್ಷಯ ತೃತೀಯ ದಿನ ವೈಶಾಖ ಶುದ್ಧ ನಾಲ್ಕನೇ ರೋಹಿಣಿ ನಕ್ಷತ್ರದಂದು ಬಸವಣ್ಣನವರ ಜನನವಾಗಿದೆ ಎಂದು ತಿಳಿಸಿದರು. 1914 ರಿಂದ ನಕ್ಷತ್ರದ ಆಧಾರದ ಮೇಲೆಯೇ ಬಸವ ಜಯಂತಿ ಆಚರಿಸಲು ಪ್ರಾರಂಭಿಸಲಾಯಿತು.


ಆಗಿನ 'ಮೈಸೂರು ಸ್ಟಾರ್' ಪತ್ರಿಕೆಗೆ ಪ್ರಕಟಣೆ ಕಳುಹಿಸುತ್ತಿದ್ದರು, ಅದನ್ನು ಓದಿ ಅರಿತುಕೊಂಡ ನಾಡಿನ ಜನರು ಅದೇ ದಿವಸ ಬಸವ ಜಯಂತಿ ಆಚರಿಸುವ ಪರಿಪಾಠ ಬೆಳೆಯಿತು. ಅಂದು ದಾವಣಗೆರೆಯಲ್ಲಿ ನೆಟ್ಟ ಬಸವ ಜಯಂತಿ ಆಚರಣೆಯ ಸಸಿ ಇಂದು ಹೆಮ್ಮರವಾಗಿ ಬೆಳೆದಿದೆ.ಕನ್ನಡ ನಾಡಿನ ಮಹತ್ವಪೂರ್ಣ ಸಾಂಸ್ಕೃತಿಕ ಉತ್ಸವವಾಗಿ ಇದನ್ನು ಆಚರಿಸಲಾಗುತ್ತಿದೆ. ಅಖಿಲ ಭಾರತ ವೀರಶೈವ ಮಹಾಸಭಾ, ಬಸವ ಕೇಂದ್ರ, ಬಸವ ಸಮಿತಿ, ಬಸವ ತತ್ವ ಪ್ರಚಾರ ಸಂಸ್ಥೆಗಳು, ಮಠ-ಮಾನ್ಯಗಳು, ವಿವಿಧ ಸಾಮಾಜಿಕ ಸಂಘಟನೆಗಳು ಇದನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳುತ್ತಾ ಬಂದಿವೆ. ತರುಣರಿಗಾಗಿ 1917ರಲ್ಲಿ ಸ್ವಾತಂತ್ರ್ಯ ಚಳವಳಿಗೆ ಮತ್ತು ಧಾರ್ಮಿಕವಾಗಿ ಸಂಘಟಿಸಲು ಲಿಂಗಾಯತ (ವೀರಶೈವ) ತರುಣ ಸಂಘ ಸ್ಥಾಪಿಸಿದರು.

ಬಾಲಗಂಗಾಧರ ತಿಲಕರು ಮಹಾರಾಷ್ಟ್ರದಲ್ಲಿ ಗಣೇಶನ ಹಬ್ಬ ಸಂಘಟಿಸಿದಂತೆ 'ಬಸವ ಪ್ರಭಾತ್ ಫೇರಿ'ಯನ್ನು ಮಂಜಪ್ಪ ಅವರು ಪ್ರಾರಂಭಿಸಿ ಸರ್ವ ಜನಾಂಗದವರನ್ನು ಕರೆದುಕೊಂಡು ಬಸವ ತತ್ವ ಮತ್ತು ರಾಷ್ಟ್ರಧರ್ಮವನ್ನು ಪ್ರಸಾರ ಮಾಡಿದರು. ಅಂದು ಶ್ರೀ ವಿರಕ್ತಮಠದಲ್ಲಿ ಪ್ರಾರಂಭವಾದ ಬಸವ ಜಯಂತಿ, ಶ್ರಾವಣ ಮಾಸ ಪ್ರವಚನ, ಬಸವ ಪ್ರಭಾತ್ ಫೇರಿ ಕಾರ್ಯಕ್ರಮಗಳು ಇಂದಿಗೂ ನಿರಂತರವಾಗಿ ನಡೆಯುತ್ತಲೇ ಬಂದಿವೆ. ಚಿತ್ರದುರ್ಗ ಮುರುಘಾಮಠದ ಜಗದ್ಗುರುಗಳಾದ ಶ್ರೀ ಜಯದೇವ, ಶ್ರೀ ಜಯವಿಭವ, ಶ್ರೀ ಮಲ್ಲಿಕಾರ್ಜುನ, ಶ್ರೀ ಶಿವಮೂರ್ತಿ ಮುರುಘಾ ಶರಣರ ಆಶೀರ್ವಾದ ಮತ್ತು ಮಾರ್ಗದರ್ಶನದೊಂದಿಗೆ ದಾವಣಗೆರೆ ಭಕ್ತರ ಸೇವೆ, ಸಹಕಾರದಿಂದ ಯಶಸ್ವಿಯಾಗಿ ಮುನ್ನಡೆಯುತ್ತಿವೆ. ಶರಣ ಸಂಸ್ಕೃತಿಯ ಪರಂಪರೆಯನ್ನು ಉಳಿಸಿ, ಬೆಳೆಸುವ ಕಾರ್ಯವು ಮಾದರಿಯಾಗಿದೆ.

ದಾವಣಗೆರೆಯಲ್ಲಿ ಈ ಬಾರಿ ಬಸವ ಜಯಂತಿ ಸಮಾರಂಭ ಕಳೆದ 109 ವರ್ಷಗಳಿಗಿಂತ ವಿಶೇಷವಾಗಿ, ವಿಭಿನ್ನವಾಗಿ ಜರುಗುತ್ತಿದೆ. ದಿನಾಂಕ 4-5-2022 ಬುಧವಾರ ಮಧ್ಯಾಹ್ನ 2 ಗಂಟೆಗೆ ವಿರಕ್ತಮಠದಿಂದ ಬಸವ ಜಯಂತಿ ಉತ್ಸವದ ಬೃಹತ್ ಮೆರವಣಿಗೆ ಪ್ರಾರಂಭವಾಗಿ ಅಲ್ಲಿಂದ ಶಿವಯೋಗಾಶ್ರಮವನ್ನು ತಲುಪಲಿದೆ. ಈ ವರ್ಷ ಸಮಾರಂಭವನ್ನು ಭವ್ಯವಾಗಿ, ದಿವ್ಯವಾಗಿ ವಿಜೃಂಭಣೆಯಿಂದ ಆಚರಿಸಲು ಕಾರಣಕರ್ತರು ಬಸವ ಜಯಂತ್ಯೋತ್ಸವ ಸಮಿತಿಯ ಅಧ್ಯಕ್ಷ ಬಿ.ಜೆ. ಅಜಯಕುಮಾರ್‌ರವರಾಗಿದ್ದಾರೆ. ಇವರಲ್ಲಿ ಒಳ್ಳೆಯ ಸಂಘಟನಾ ಶಕ್ತಿಯಿದೆ. ನಮಗೆಲ್ಲರಿಗೂ ಮುಂದಿನ ಭರವಸೆಯ ನಾಯಕರಾಗಿ ಕಂಡಿದ್ದಾರೆ. ಅವರಿಂದ ಬಸವ ತಂದೆಯ ಜಯಂತ್ಯೋತ್ಸವವು ಬೃಹತ್ತಾಗಿ ನಡೆಯುತ್ತಿದೆ. ಹಿಂದಿನ ದಿನಗಳಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಸಮಾರಂಭ ನಡೆದೇ ಇಲ್ಲ. ಈ ವರ್ಷ 5-6 ಸಾವಿರ ಜನರು ಮೆರವಣಿಗೆಯಲ್ಲಿ ಪಾಲ್ಗೊಳ್ಳುವರು. ಸರ್ವ ಸಮುದಾಯದ ಜನರನ್ನು ಈಗಾಗಲೇ ಆಮಂತ್ರಿಸಲಾಗಿದೆ.


ಮೆರವಣಿಗೆಯಲ್ಲಿ ಹತ್ತಾರು ಜಾನಪದ ಕಲಾ ಮೇಳದ ತಂಡಗಳು ಭಾಗವಹಿಸಲಿವೆ. ಬಸವಾದಿ ಶರಣರ, ದಾರ್ಶನಿಕರ ಸ್ತಬ್ದ ಚಿತ್ರಗಳ ಮೆರವಣಿಗೆಯು ಜರುಗಲಿದೆ.

ಈ ಬೃಹತ್ ಬಸವ ಜಯಂತಿ ಉತ್ಸವದ ಮೆರವಣಿಗೆಯನ್ನು ಚಿತ್ರದುರ್ಗ



ಮುರುಘಾಮಠದ ಪರಮಪೂಜ್ಯ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಉದ್ಘಾಟನೆ ಮಾಡುವರು. ಸರ್ವ ಸಮುದಾಯದ ಸ್ವಾಮೀಜಿಯವರು ನೇತೃತ್ವ ವಹಿಸುತ್ತಾರೆ. 4ರ ಸಂಜೆ 6 ಗಂಟೆಗೆ ಶಿವಯೋಗಾಶ್ರಮದಲ್ಲಿ ಬಸವ ಜಯಂತಿ ಸಮಾರಂಭ ನಡೆಯುತ್ತದೆ. ನಮ್ಮ ದಾವಣಗೆರೆಯ ಬಸವ ಭಕ್ತರು, ಎಲ್ಲಾ ಶರಣ, ಶರಣೆಯರು ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ.



**- ಶ್ರೀ ಬಸವಪ್ರಭು ಸ್ವಾಮೀಜಿ**
**ವಿರಕ್ತ ಮಠ - ಶ್ರೀ ಶಿವಯೋಗಾಶ್ರಮ, ದಾವಣಗೆರೆ.**

# ಸಿಎಂ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಉಲ್ಲಂಘನೆ

## ಜೆಡಿಎಸ್ ಆರೋಪ

ಜಗಳೂರು, ಮೇ 3- ಪಟ್ಟಣದಲ್ಲಿ ನಡೆದ ಭದ್ರಾ ಮೇಲ್ದಂಡೆ ಯೋಜನೆ ಶಂಕುಸ್ಥಾಪನಾ ಸಮಾರಂಭದಲ್ಲಿ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ಜೆಡಿಎಸ್ ಮುಖಂಡ ಕೆ.ಬಿ. ಕಲ್ಲೇರುದ್ರೇಶ್ ಆರೋಪಿಸಿದ್ದಾರೆ.

ಪಟ್ಟಣದ ಪತ್ರಿಕಾಭವನದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಶಂಕು ಸ್ಥಾಪನೆ ಸಮಾರಂಭದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆದ ಸರ್ಕಾರಿ ಸಮಾರಂಭದಲ್ಲಿ ಸರ್ಕಾರದ ಮುಖ್ಯಸ್ಥರೇ ಅಲ್ಲದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಆಹ್ವಾನಿಸಲಾಗಿದೆ. ಆದರೆ ಹರಿಹರದ ಶಾಸಕರನ್ನು ಆಹ್ವಾನಿಸಿಲ್ಲ ಎಂದರು. ಸರ್ಕಾರಿ ಕಾರ್ಯಕ್ರಮ ಪಕ್ಷವೊಂದರ ಕಾರ್ಯಕ್ರಮದಂತೆ ಭಾಸವಾಗಿದ್ದು, ಯಡಿಯೂರಪ್ಪನವರು ವಿರೋಧ ಪಕ್ಷದ ವರ ಠೇವಣಿ ಕಳೆಯಿರಿ ಎಂದು



ಹೇಳಿ ರಾಜಕೀಯ ಭಾಷಣ ಮಾಡಿದ್ದಾರೆ. ಇದರಿಂದಾಗಿ ಶಿಷ್ಟಾಚಾರ ಉಲ್ಲಂಘನೆಯಾಗಿದ್ದು, ಸ್ಪೀಕರ್ ಅವರಿಗೆ ದೂರು ನೀಡಲಾಗುವುದು ಎಂದು ತಿಳಿಸಿದರು.

ಭದ್ರಾ ಮೇಲ್ದಂಡೆ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷರಾಗಿದ್ದ, ತೋರಣಗಟ್ಟೆ ತಿಪ್ಪೇಸ್ವಾಮಿ ಅವರ ನೇತೃತ್ವದಲ್ಲಿ ನಡೆದ ನೂರಾರು ದಿನಗಳ ಹೋರಾಟದ ಫಲವಾಗಿ ಇಂದು ಯೋಜನೆ ಕಾರ್ಯರೂಪಕ್ಕೆ ಬಂದಿ ದೆ. ತಾಲ್ಲೂಕಿನ ವಿವಿಧ ಸಂಘಟನೆಗಳು, ಸರ್ವಪಕ್ಷಗಳ ಪ್ರತಿಭಟನೆ ಮತ್ತು ಸರ್ಕಾರದ ನಿಯೋಗಗಳಲ್ಲಿ ಭಾಗವಹಿಸಿ ಶ್ರಮಿಸಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆ ಜಾರಿಯಲ್ಲಿ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಎಲ್ಲ ಪಕ್ಷಗಳ ಪಾತ್ರ ಇದೆ, ಕೇವಲ ಬಿಜೆಪಿ ಸರ್ಕಾರದಿಂದ ಯೋಜನೆ ಜಾರಿಯಾಗಿದೆ ಎಂದು ಬಿಂಬಿ ಸುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

2.40 ಟಿಎಂಸಿ ನೀರು ಜಗಳೂರು ತಾಲ್ಲೂಕಿಗೆ ಹಂಚಿಕೆಯಾಗಿದ್ದು ಸಹ ಕುಮಾರಸ್ವಾಮಿಯವರ ಸರ್ಕಾರದಲ್ಲಿ ಎಂದು ಕಲ್ಲೇರುದ್ರೇಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಉಸ್ಮಾನ್ ಅಲಿ, ರಾಜಣ್ಣ, ಚನ್ನಬಸಪ್ಪ ಮತ್ತಿತರರು ಇದ್ದರು.

# ಕಂಚಿಕೆರೆ ಶ್ರೀ ವೀರಾಂಜನೇಯ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಕ್ಕೆ ಚಾಲನೆ



ಹರಪನಹಳ್ಳಿ, ಮೇ 3- ತಾಲ್ಲೂಕಿನ ಕಂಚಿಕೆರೆ ಗ್ರಾಮದ ಶ್ರೀ ಬಿದ್ದಹನುಮಪ್ಪನ ಮಟ್ಟಿ ಶ್ರೀ ವೀರಾಂಜನೇಯ ಮಹಾಸ್ವಾಮಿ, ಶ್ರೀ ಕ್ಷೇತ್ರದ ನಿರ್ಮಾಣ ಮತ್ತು ಅಭಿವೃದ್ಧಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಕಂಚಿಕೆರೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಚಿತ್ರದುರ್ಗ ಛಲವಾದಿ ಗುರುಪೀಠದ ಶ್ರೀ ಬಸವನಾಗಿ ದೇವ ಶರಣರು, ಶ್ರೀಕ್ಷೇತ್ರ ಬಿದ್ದ ಹನುಮಪ್ಪನ ಮಟ್ಟಿ ಸುಕ್ಷೇತ್ರದ ಧರ್ಮಾಧಿಕಾರಿ ಶ್ರೀ ಬಸವರಾಜ ಗುರೂಜಿ ಸಾನ್ನಿಧ್ಯದಲ್ಲಿ ನೆರವೇರಿತು.

ಡಾ. ಬಿದರಿ ಕೊಟ್ರೇಶ್ ಕಂಚಿಕೆರೆ ಅಧ್ಯಕ್ಷತೆ ವಹಿಸಿದ್ದರು. ಅಣ್ಣಪ್ಪ ವೈ.ಡಿ., ನ್ಯಾಯವಾದಿ ರೇವಣ್ಣ ಬಳ್ಳಾರಿ, ಸಿದ್ದಗಂಗಾ ವಿದ್ಯಾಸಂಸ್ಥೆಯ ಡಿ'ಸೌಜ ಶಿವಣ್ಣ, ಬಸವ ಕೇಂದ್ರ ಮಹಿಳಾ ಘಟಕದ ಅಧ್ಯಕ್ಷರಾದ ಮಹದೇವಮ್ಮ, ಕಂಚಿಕೆರೆ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಪಿ. ಕೆಂಚನಗೌಡ್ರು, ಸುನೀಲ್ ಕುಮಾರ್ ಬಿದರಿ, ಡಿ.ಕೆ.ಶಿವಕುಮಾರ್, ಪೋತಲಕಟ್ಟೆ ಗ್ರಾಪಂ ಉಪಾಧ್ಯಕ್ಷ ಹಾಲೇಶಪ್ಪ, ಪತ್ರಕರ್ತ ಇಜಾರಿ ವೆಂಕಟೇಶ್, ಸಮತಾ ವಿದ್ಯಾಲಯದ ಅಧ್ಯಕ್ಷ ಎಂ.ಟಿ.ಸುಭಾಷ್ ಚಂದ್ರ ಮತ್ತಿತರರು ಭಾಗವಹಿಸಿದ್ದರು.

ಸಂಗಪ್ಪ ತೋಟದ್ ಪ್ರಾರ್ಥಿಸಿದರು, ಕಲಾವಿದ ಪಿ.ಜಗನ್ನಾಥ್ ನಿರೂಪಣೆ, ನಿಂಗರಾಜ್ ಕಂಚಿಕೆರೆ ವಂದಿಸಿದರು.

# ನೆಲಹೊನ್ನೆಯಲ್ಲಿ ಇಂದಿನಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು

ಹೊನ್ನಾಳಿ ತಾಲೂಕಿನ ನೆಲಹೊನ್ನೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಮಹಾ ಗಣಪತಿ, ಶ್ರೀ ಕರಿಯಮ್ಮದೇವಿ, ಶ್ರೀ ಗುಂಡಮ್ಮ ದೇವಿ, ಶ್ರೀ ಚೌಡೇಶ್ವರಿ ದೇವಿಯ ನೂತನ ದೇವಾಲಯ ಪ್ರವೇಶ, ಶಿಲಾಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಶ್ರೀ ಕರಿಯಮ್ಮ ದೇವಿ-ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೇವಸ್ಥಾನಗಳ ಗೋಪುರದ ಕಳಸ ಪ್ರತಿಷ್ಠಾಪನಾ ಸಮಾರಂಭವು ಇಂದಿನಿಂದ ಮೂರು ದಿನ ನಡೆಯಲಿದೆ.

ಇಂದು ಸಂಜೆ 5 ರಿಂದ 6.15 ರೊಳಗೆ ರಟ್ಟೀಹಳ್ಳಿ ಕಬ್ಬಿಣ ಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ರಾಂಪುರ ಶ್ರೀ ಶಿವಕುಮಾರ ಹಾಲಸ್ವಾಮೀಜಿ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ವಿಧಿಗಳು ನಡೆಯಲಿವೆ. ನಾಳೆ ಗುರುವಾರ ಬೆಳಗ್ಗೆ 7ಕ್ಕೆ ವಿವಿಧ ಕಲಶ ಪೂಜೆಗಳು, ಮಹಾಮಂಗಳಾರತಿ, ಮಧ್ಯಾಹ್ನ 3.30ಕ್ಕೆ ಪಂಡಿತ ಪಾರಾಯಣ, ಸಂಜೆ 7.15ಕ್ಕೆ ದುರ್ಗಾ ಹೋಮ, ಚಂಡಿಕಾ ಹೋಮ, ಭಜನೆ ನಡೆಯಲಿದೆ.

ದಿನಾಂಕ 6ರ ಶುಕ್ರವಾರ ಬೆಳಗ್ಗೆ 5ರಿಂದ 6.15ರೊಳಗೆ ಕುಂಭ ಪೂಜೆ, ಬೆಳಿಗ್ಗೆ 11ರಿಂದ ಧಾರ್ಮಿಕ ಸಭೆ ನಡೆಯಲಿದೆ. ರಟ್ಟೀಹಳ್ಳಿ ಕಬ್ಬಿಣ ಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ರಾಂಪುರ ಶ್ರೀ ಶಿವಕುಮಾರ ಹಾಲಸ್ವಾಮೀಜಿ ಸಾನಿಧ್ಯ ವಹಿಸುವರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಶೀಲ್ದಾರ್ ಎಚ್.ಜೆ. ರಶ್ಮಿ, ಉಪ ತಹಸೀಲ್ದಾರ್ ಎಂ.ಕೆ. ಇಂಗಳಗುಂದಿ, ರಾಜಸ್ವ ನಿರೀಕ್ಷಕ ಬಿ.ಎಂ. ರಮೇಶ್, ಶ್ರೀ ಕರಿಯಮ್ಮ ದೇವಿ ದೇವಸ್ಥಾನದ ಆಡಳಿತಾಧಿಕಾರಿ-ಕುಂಬಳೂರು ವೃತ್ತದ ಗ್ರಾಮ ಲೆಕ್ಕಾಧಿಕಾರಿ ಸೋಮಶೇಖರ್ ಮತ್ತಿತರರು ಭಾಗವಹಿಸಲಿದ್ದಾರೆ.

# ಹಿಂದೂ ಹೆಸರಿನಲ್ಲಿ ಸ್ವಾಸ್ಥ್ಯ ಕೆಡಿಸುವ ಕೆಲಸ

**(3ನೇ ಪುಟದಿಂದ)** ನೌಕರರ ಸಂಘದ ಅಧ್ಯಕ್ಷ ಬಿ. ಪಾಲಾಕ್ಷಿ, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಕೆ. ಶಿವಶಂಕರ್, ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ಪ್ರಸನ್ನ ಚಂದ್ರಪ್ರಭು, ಕ.ಸಾ.ಪ. ತಾಲ್ಲೂಕು ಅಧ್ಯಕ್ಷೆ ಸುಮತಿ ಜಯಪ್ಪ, ಕ.ಸಾ.ಪ. ಗೌರವ ಕಾರ್ಯದರ್ಶಿಗಳಾದ ರೇವಣಸಿದ್ದಪ್ಪ ಅಂಗಡಿ, ಬಿ. ದಿಳ್ಯಪ್ಪ ಮತ್ತಿತರರು ಉಪಸ್ಥಿತರಿದ್ದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
27ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ತಾಯಿ ದಿ. ಜಯಲಕ್ಷ್ಮಿ ಇವರ ಜ್ಞಾಪಕಾರ್ಥವಾಗಿ ರಾಜೇಂದ್ರ ಕುಮಾರ್ ಮತ್ತು ಕುಟುಂಬ ವರ್ಗದವರ ಸೇವಾರ್ಥ, ದಾವಣಗೆರೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ
1) 30X40 (9X12) ವೆಸ್ಟ್ (21 ಲಕ್ಷ)
2) 30X50 (9X15) (35 ಲಕ್ಷ) ಪೂರ್ವ
3) 30x50 ದಕ್ಷಿಣ (25 ಲಕ್ಷ) ಗುಡ್ ಲೊಕೇಶನ್
ಕಿರಣ್ ಬೂಸ್ನೂರ್ : 98440-63409
(ರಿಜಿಸ್ಟರ್ ಖರ್ಚು ಸೇರಿ. ಯಾವುದೇ ಕಮೀಷನ್ ಇಲ್ಲ)

**ಮನೆ ಬಾಡಿಗೆಗೆ ಇದೆ**
ಎಸ್‌ಎಸ್ ಬಡಾವಣೆಯಲ್ಲಿ 'ಎ' ಬ್ಲಾಕ್ 2 ಬೆಡ್ರೂಮ್ ಪೂರ್ವಕ್ಕೆ ಸೈಟು, ಪೂರ್ವಕ್ಕೆ ಬಾಗಿಲು
ಮಂಜುನಾಥ್ ಏಜೆಂಟ್
98444 91792

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 40x60 East, 40x60 North, 40x60 South 40 ಅಡಿ ರೋಡ್‌ಗಿದೆ. 40x50 North, 30x50 South, 30x40 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಅಟೆಂಡರ್ ಕೆಲಸಕ್ಕೆ ಡ್ರೈವಿಂಗ್ ಲೈಸೆನ್ಸ್ ಹೊಂದಿರುವ ಸ್ಥಳೀಯ ಯುವಕರು ಬೇಕಾಗಿದ್ದಾರೆ
ಅಂದನೂರು ಚಿಟ್ಸ್ (ರಿ)
ರಾಂ & ಕೋ ಸರ್ಕಲ್, ದಾವಣಗೆರೆ.

**ಸೈಟು ಮಾರಾಟಕ್ಕಿದೆ**
ಕರ್ನಾಟಕ ಹೌಸಿಂಗ್ ಬೋರ್ಡ್ ಲೇಔಟ್
ಕರ್ನಾಟಕ ಹೌಸಿಂಗ್ ಬೋರ್ಡ್ ಮತ್ತು ತುಂಗಭದ್ರ ಬಡಾವಣೆಯಲ್ಲಿ 30x40 ಹಾಗೂ 40x60 ಅಳತೆ ಉಳ್ಳ ವಾಸಕ್ಕೆ ಯೋಗ್ಯ ಸೈಟುಗಳು ಮಾರಾಟಕ್ಕಿವೆ
91132 01648
ಪುರುಷೋತ್ತಮ್ ಗ್ರೂಪ್, ದಾವಣಗೆರೆ

**ಬಾಡಿಗೆ ಮನೆಗಳು ದೊರೆಯುತ್ತವೆ ವಿಚಾರಿಸಿರಿ**
ನೂತನ್ ಕಾಲೇಜ್ ಹತ್ತಿರ ಆಂಜನೇಯ ಬಡಾವಣೆಯಲ್ಲಿ ಸಿಂಗಲ್ ಬೆಡ್ ರೂಂ ಮನೆ 3 ಬೆಡ್ ರೂಂ ಮನೆ, 2 ಬೆಡ್ ರೂಂ ಮನೆ.
ದಕ್ಷಿತ್ ಏಜೆಂಟ್
77955 06795

**ಸೈಟು ಮಾರಾಟಕ್ಕಿದೆ**
ಶಿವಪಾರ್ವತಿ ಲೇಔಟ್
30x55 ಪೂರ್ವ
ರಿಯಲ್ ಎಸ್ಟೇಟ್ ಏಜೆಂಟ್
86181 82332
(ಸೈಟು ಕೊಳ್ಳಲು, ಮಾರಲು ಸಂಪರ್ಕಿಸಿ)

**ಬೇಲರ್ ದಾರ ದೊರೆಯುತ್ತದೆ**
ದಾವಣಗೆರೆಯ ಈರುಳ್ಳಿ ಮಾರುಕಟ್ಟೆ ರಸ್ತೆಯಲ್ಲಿರುವ ಅಕ್ಕಿ ಮಳಿಗೆ ಹಿಂಭಾಗದ
ಕುಶಾಲ್ ಎಂಟರ್ ಪ್ರೈಸಸ್
ಮಳಿಗೆ ಸಂಖ್ಯೆ 7 ರಲ್ಲಿ ಭತ್ತ, ರಾಗಿ, ಹುಲ್ಲು ಬಂಡಲ್ ಕಟ್ಟುವ ಬೇಲರ್ ದಾರ ದೊರೆಯುತ್ತದೆ.
ಸಂಪರ್ಕಿಸಿ : ಶಿವರಾಜ್ ಕುಂಕೋದ್
90081 22113

**ಸೈಟುಗಳು ಮಾರಾಟಕ್ಕಿವೆ**
KHB ಗ್ಲಾಸ್ ಹೌಸ್ ಹತ್ತಿರ, ಶಿವ ಪಾರ್ವತಿ, ಡಿಸಿಎಂ ಲೇಔಟ್ ಹತ್ತಿರ, 30x40 ಉತ್ತರ, 30x50 ಉತ್ತರ, 40x60 ಉತ್ತರ
ಸಂಪರ್ಕಿಸಿ : ಲಿಂಗರಾಜ್
97425 12125

**WANTED**
Accountant, Network Engineer, In Premise/Field Technician, Sales Manager/ Executives, HR, Computer and Office Job. Software Tester and Developer
98444 92888

**ಮನೆಗಳು ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, ವಾಜಪೇಯಿ ಲೇಔಟ್‌ನಲ್ಲಿ 30x40 East ಮನೆ, 30x40 East ಡುಪ್ಲೆಕ್ಸ್ ಮನೆ, 30x50 North ಸೈಟು, 30x40 East ಸೈಟು, 30x40 West ಸೈಟು
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಅಡಿಕೆ ತೋಟದ ಅನುಭವ ಇರುವ ಕುಟುಂಬ ಬೇಕಾಗಿದ್ದಾರೆ.
ಇಚ್ಚೆ ಇರುವವರು ಸಂಪರ್ಕಿಸಿ :
M : 99002 65653

**ಸೈಟ್ ಮಾರಾಟಕ್ಕೆ ಇದೆ**
ಮಹಾಲಕ್ಷ್ಮಿ ಲೇಔಟ್, ಶಿವಗಂಗೆ ಕಲ್ಯಾಣ ಮಂಟಪದ ಹಿಂಭಾಗ
41x92 ದಕ್ಷಿಣ
ಸೈಟ್ ಮಾರಾಟಕ್ಕಿದೆ.
98448 82366

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಕೃಷ್ಣ ಫ್ಲೆಕ್ಸ್ ಪ್ರಿಂಟಿಂಗ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. ಹಳೇ ಬಸ್ ನಿಲ್ದಾಣದ ಎದುರು, ಪಿ.ಬಿ ರಸ್ತೆ, ದಾವಣಗೆರೆ.
96117 71970

**ಶಿಕ್ಷಕಿಯರು ಬೇಕಾಗಿದ್ದಾರೆ**
ಸರ್.ಎಂ ವಿಶ್ವೇಶ್ವರಯ್ಯ ರೆಸಿಡೆನ್ಷಿಯಲ್ ಸ್ಕೂಲ್, ಪಿ.ಬಿ ರೋಡ್, ದೊಡ್ಡಬಾತಿ.
ವಿಷಯಗಳು : ಕನ್ನಡ, ಇಂಗ್ಲಿಷ್, ಹಿಂದಿ, ಸಮಾಜ, ವಿಜ್ಞಾನ, ಗಣಿತ.

**ಮನೆ ಮಾರಾಟಕ್ಕೆ ಇದೆ**
ಚಿಕ್ಕ ಬೂದಾಳ್‌ನಲ್ಲಿ ಮನೆ ಮಾರಾಟಕ್ಕೆ ಇದೆ.
99027 57300
97405 92589

**ರಘುವೀರ್ ಬಾರ್ & ರೆಸ್ಟೋರೆಂಟ್**
ತಂದೂರಿ ರೋಟಿ ಮಾಡಲು ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ :
ಫೋ. : 86180 45757

**ಬೇಕಾಗಿದ್ದಾರೆ**
ಐಸ್ ಕ್ರೀಂ ಸಪ್ಲೈಗೆ ಹುಡುಗರು ಬೇಕಾಗಿದ್ದಾರೆ ಮತ್ತು ಡ್ರೈವರ್ ಕಮ್ ಸೇಲ್ಸ್‌ಗೆ ಬೇಕಾಗಿದ್ದಾರೆ.
ಸಂಪರ್ಕಿಸಿ :
96201 28586

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**Wanted**
10 to 12 thousand square feet ware house wanted
3 male candidate Helpers required for vehicle.
Education qualification 10th or 12th pass.
91139 24513

**KIRAN VIDYA SAMSTHE (R)**
**JNANA NAIVEDYA CONVENT AND HIGH SCHOOL**
above Appolo Pharmacy, Near Kalidasa Circle, Saraswathi Nagar
**WANTED TEACHER**
1) Kannada - 2 MA/BA., BEd.,
2) English - 2 MA/BA., BEd.,
3) Hindhi - 2 MA/BA, BEd.,
4) Mathematics - 2 MSc/BSc.,BEd.,
5) Science - 2 MSc.,/BSc., B.Ed.,
Social Science -2 MA/BA/BEd.,
Interview on 6.4.2022 at 2 pm to 5 pm at School Campus
Contact number: 98441 55585

**ಸೈಟು ಮಾರಾಟಕ್ಕಿದೆ**
ಶಂಕರ ವಿಹಾರ ಬಡಾವಣೆ, ಫ್ಲೈ ಓವರ್ ಹತ್ತಿರ ಬ್ಲಡ್ ಬ್ಯಾಂಕ್ ಹಿಂಭಾಗ, 1ನೇ ಮೇನ್, 5ನೇ ಕ್ರಾಸ್ (ನಂ. 312) ದಕ್ಷಿಣಕ್ಕೆ ರಸ್ತೆ, ಇರುವ ಸೈಟು ಮಾರಾಟಕ್ಕಿದೆ.
ಫೋ. : 98442 36912

**REQUIRED**
Sales Executive, Sales Manager
for : FMG Praducts
Contact : 98441 20003
Shamanur Pharma & Health Care Pvt Ltd.,
374, 4th main, PJ extn., Davangere.

**ಸಂಪರ್ಕಿಸಿ**
ನುರಿತ ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ವಸತಿ ಸೌಲಭ್ಯ ಇರುತ್ತದೆ.
72044 00262, 98861 26961

**STAFF REQUIRED**
For PU College
Subjects=computer science & English. Address : JH patel Badavane , Nagnur Road Shamnuru. Contact no :
99168 18369

**ಹೊಸ ಜೀವನ**
1) ಲಿಂಗಾಯತ 32 ವರ್ಷದ BE, MS, USAದಲ್ಲಿ ಇಂಜಿನಿಯರ್, ವಿಚ್ಛೇದಿತನಿಗೆ ಸೂಕ್ತ ವಧು ಬೇಕಾಗಿದೆ. 2) ಲಿಂಗಾಯತ 38 ವರ್ಷದ ಸರ್ಕಾರಿ ನೌಕರಿಯಲ್ಲಿರುವ ವಿಚ್ಛೇದಿತೆಗೆ ಸೂಕ್ತ ವರ ಬೇಕಾಗಿದೆ.
M : 98807 29108

**ಶಾಲೆ ಮಾರಾಟಕ್ಕಿದೆ**
ದಾವಣಗೆರೆ ಹೊಂಡದ ಸರ್ಕಲ್ ಹತ್ತಿವಿರುವ ಖಾಸಗಿ ಶಾಲೆ LKG ಯಿಂದ 8ನೇ ತರಗತಿ ವರೆಗೆ. ಇಂಗ್ಲಿಷ್ ಮೀಡಿಯಂ
70229 36433

**TO-Let**
1200 Sq.Ft Cellar Floor
1BHK Old House
Opp. AVK College
P.J Extension.
M : 94488 86346

**Required for**
NOKIA Godrej
SALESMAN
DELIVERY BOY'S
LADIES FOR OFFICE WORK
Age limit: 22 years, Qul : SSLC
Preferably Davangere
Candidates attractive salary
Jain Enterprises
Chowkipet Chigateri Galli, Back side to old BSC.,DVG-1
98445 55551
98444 55553

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಟ್ಯೂಷನ್**
ನಿವೃತ್ತ ಪ್ರೊಫೆಸರ್ U. ಗುರುಸ್ವಾಮಿ ಅವರಿಂದ ರಸಾಯನಶಾಸ್ತ್ರ ವಿಷಯದಲ್ಲಿ ಪ್ರಥಮ ಮತ್ತು ದ್ವಿತೀಯ PU ವಿದ್ಯಾರ್ಥಿಗಳಿಗೆ ಟ್ಯೂಷನ್ ಮಾಡಲಾಗುತ್ತದೆ.
ಸಂದರ್ಶಿಸಿ
MCC 'B' Block DVG
M : 99720 66772

**ಮನೆ ಬಾಡಿಗೆಗೆ ಇದೆ**
ಬೋರ್ ಮತ್ತು ನಲ್ಲಿ ನೀರಿನ ಸೌಕರ್ಯವಿರುವ 2 ಬೆಡ್ ರೂಂವುಳ್ಳ ಸುಸಜ್ಜಿತವಾದ ಮೊದಲನೇ ಮಹಡಿಯಲ್ಲಿರುವ ಮನೆ ಬಾಡಿಗೆಗೆ ಇದೆ. ಈರಮ್ಮ ನಿಲಯ, ಎಂಸಿಸಿ ಎ ಬ್ಲಾಕ್, 4ನೇ ಮುಖ್ಯರಸ್ತೆ, ಹಳೇ ಗುರು ಸ್ಕ್ಯಾನಿಂಗ್ ಪಕ್ಕ, ದಾವಣಗೆರೆ. ವಿಚಾರಿಸಿ :
98868 25228, 98866 53398

**New Commercial Building For Rent**
3 Floor Commercial Building at Chowkipete (Beside Gowdara Jayadevappa Cloth Shop) each floor 1000 sq.ft Total 3000 sq.ft. (3 floors)
98441 41049, 98440 64712

**ಜಾಗ ಬಾಡಿಗೆಗೆ ಇದೆ**
20x100 ಅಳತೆಯ 15 HP Power Supply ಇರುವ ಜಾಗ ಕೈಗಾರಿಕಾ ಉಪಯೋಗಕ್ಕೆ ಬಾಡಿಗೆಗೆ ಇದೆ. ಪಿ.ಬಿ. ರೋಡ್, ಹುಂಡೈ ಶೋರೂಂ ಪಕ್ಕ ಆವರಗೆರೆ, ಪೂನಾ-ಬೆಂಗಳೂರು ರೋಡ್.
72045 77823

**Wanted**
Receptionist (only ladies)
Qualification B.com.
Empire trading.
DCM township Davanagere
Contact.
91130 43495

**WORK FROM HOME**
Male/Female, Full / Part time
Hand writing work. Small Letter to Capital Letter
Earn Per month 12,000/- to 15,000/-
89718 52431

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿ. 04.05.2022ರ ಬುಧವಾರ ಮತ್ತು ನಾಳೆ ದಿ.05.05.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಬಾಡಿಗೆಗೆ ಇದೆ**
3 BHK ಗ್ರೌಂಡ್ ಫ್ಲೋರ್, ಎಂಸಿಸಿ "ಬಿ" ಬ್ಲಾಕ್, 4ನೇ ಮೇನ್, 4ನೇ ಕ್ರಾಸ್ (ಹಾಸ್ಪಿಟಲ್ ನರ್ಸಿಂಗ್ ಹೋಂ, ಹೋಟೆಲ್ ಮಾಡಲು ಬಾಡಿಗೆಗೆ ಇದೆ)
83101 89690, 98456 47144

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇರಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/ PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
81054 20867

**EARN EXTRA INCOME PART TIME / FULL TIME BUSINESS OPPORTUNITY**
* In Trending Wellness Industry
* BE Your Own **BOSS**
* Training Provided from Successful Leaders
* Chance to work with Biggest growing Company in the World
* Your Choice of Investment.
(Interested People)
Contact @ 78294 70947

**TO-LET**
Commercial Space 2400 Sft for Rent G+1 with 80ft road facing near RTO office on Kondajji Main road. available in different size suitable for Bank/ATM/Supermarket/Showroom/ Poly clinic/Office/Parlour/GYM/ Studio/Yoga Centre etc.
99864 52968

## ನಗರದಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆಗಳ ತರಬೇತಿ ಇಂದಿನಿಂದ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆಗಳ ಬಗ್ಗೆ ತರಬೇತಿ ನೀಡಲಾಗುತ್ತದೆ.

ಇಂದು ಮತ್ತು ನಾಳೆ ಆಧುನಿಕ ಹೈನುಗಾರಿಕೆ ತರಬೇತಿ, ನಾಡಿದ್ದು ದಿನಾಂಕ 6 ಮತ್ತು 7 ರಂದು 25 ಜನರಿಗೆ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ, ಮೇ 9 ಮತ್ತು 10 ರಂದು 25 ಜನರಿಗೆ ಆಧುನಿಕ ಹೈನುಗಾರಿಕೆ ತರಬೇತಿ, ಮೇ.12 ಮತ್ತು 13 ರಂದು 25 ಜನರಿಗೆ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ, ಮೇ 16 ಮತ್ತು 17 ರಂದು 25 ಜನರಿಗೆ ಆಧುನಿಕ ಹೈನುಗಾರಿಕೆ ತರಬೇತಿ, ಮೇ.20 ಮತ್ತು 21 ರಂದು 25 ಜನರಿಗೆ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ, ಮೇ 23 ಮತ್ತು 24 ರಂದು 25 ಜನರಿಗೆ ಆಧುನಿಕ ಹೈನುಗಾರಿಕೆ ತರಬೇತಿ, ಮೇ 25 ಮತ್ತು 26 ರಂದು 25 ಜನರಿಗೆ ಆಧುನಿಕ ಹೈನುಗಾರಿಕೆ ತರಬೇತಿ, ಮೇ 30 ಮತ್ತು 31 ರಂದು 25 ಜನರಿಗೆ ಕುರಿ, ಮೇಕೆ ಸಾಕಾಣಿಕೆ ತರಬೇತಿ ನೀಡಲಾಗುವುದು.

## ಜಿಲ್ಲೆಯಲ್ಲಿ ಇಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಉಮಾಶಂಕರ್ ಪ್ರವಾಸ

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆಯ ಎಸ್. ಆರ್ ಉಮಾಶಂಕರ್ ಅವರು ಇಂದು ಮತ್ತು ನಾಳೆ ದಾವಣಗೆರೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಎಸ್.ಆರ್ ಉಮಾಶಂಕರ್ ಅವರು ಇಂದು ಮಧ್ಯಾಹ್ನ 12 ಕ್ಕೆ ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆ ಪ್ರಗತಿ ಪರಿಶೀಲನೆ ನಡೆಸುವರು. ಮಧ್ಯಾಹ್ನ 2.30 ಕ್ಕೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ ನಡೆಸುವರು. ಸಂಜೆ 4.30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೋವಿಡ್ ಪರಿಸ್ಥಿತಿ ಪರಿಶೀಲನೆ ಹಾಗೂ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸುವರು. ನಂತರ ಜಿಲ್ಲೆಯಲ್ಲಿ ವಾಸ್ತವ್ಯ ಮಾಡುವರು.

ನಾಳೆ ಗುರುವಾರ ಬೆಳಿಗ್ಗೆ 9.30ಕ್ಕೆ ಜಿಲ್ಲೆಯಲ್ಲಿ ವಿವಿಧ ಕಾಮಗಾರಿಗಳ ಪರಿಶೀಲನೆ ನಡೆಸಿ ಸಂಜೆ 5 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಅವರ ಆಪ್ತ ಕಾರ್ಯದರ್ಶಿ ಸುನಿತಾ ಆರ್.ಬೇದ್ರೆ ತಿಳಿಸಿದ್ದಾರೆ.

## ಕೊಕ್ಕನೂರಿನಲ್ಲಿ ಇಂದು ಗುಡಿ ಉದ್ಘಾಟನೆ

ಮಲೇಬೆನ್ನೂರು ಸಮೀಪದ ಕೊಕ್ಕನೂರು ಗ್ರಾಮದ ಕೆ.ಎನ್. ರಸ್ತೆಯಲ್ಲಿ ಕೊಕ್ಕನೂರು,ಜಿ.ಟಿ. ಕಟ್ಟೆ, ಕಂಬತ್ತನಹಳ್ಳಿ ಗ್ರಾಮಗಳಿಗೆ ಸೇರಿದ ಹೊರ ಬೀರಪ್ಪನ ದೇವಸ್ಥಾನವನ್ನು ನಿರ್ಮಿಸಿದ್ದು, ಇಂದು ಬೆಳಿಗ್ಗೆ 11 ಗಂಟೆಗೆ ಉದ್ಘಾಟನೆಗೊಳ್ಳಲಿದೆ.

ದೇವಸ್ಥಾನದಲ್ಲಿ ಬೀರಲಿಂಗೇಶ್ವರ,ಚೌಡೇಶ್ವರಿ ಮತ್ತು ರೇವಣಸಿದ್ಧೇಶ್ವರರ ಮೂರ್ತಿಗಳ ಪ್ರತಿಷ್ಠಾಪನೆಯನ್ನು ಬೆಳಿಗ್ಗೆ 9-30ಕ್ಕೆ ರಟ್ಟೆಹಳ್ಳಿ ಕಬ್ಬಿಣ ಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ನೆರವೇರಿಸಿಲಿದ್ದಾರೆ. ಧಾರ್ಮಿಕ ಸಭೆಯ ಸಾನ್ನಿಧ್ಯ : ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಶ್ರೀ ವಚನಾನಂದ ಸ್ವಾಮೀಜಿ, ಶ್ರೀ ವೇಮಾನಂದ ಸ್ವಾಮೀಜಿ, ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ, ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಮತ್ತಿತರರು ವಹಿಸುವರು.

# ಪುರೋಹಿತಶಾಹಿ ವ್ಯವಸ್ಥೆ ತೊಲಗಿಸಿ ಶೋಷಿತರಿಗೆ ನ್ಯಾಯ ಒದಗಿಸಿಕೊಟ್ಟವರು ಬಸವಣ್ಣ : ಜಿಲ್ಲಾಧಿಕಾರಿ ಬೀಳಗಿ



ದಾವಣಗೆರೆ ಮೇ 3 - ಹನ್ನೆರಡನೇ ಶತಮಾನದಲ್ಲಿ ಕಲ್ಯಾಣ ರಾಜ್ಯದ ಕನಸು ಕಂಡು ಅನುಭವ ಮಂಟಪ ಸ್ಥಾಪಿಸಿ ಶೋಷಣೆಗೆ ಒಳಪಟ್ಟ ಎಲ್ಲ ಸಮುದಾಯಗಳಿಗೂ ಸಾಮಾಜಿಕ ನ್ಯಾಯ ಒದಗಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಆಯೋಜಿಸಲಾಗಿದ್ದ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಪುರೋಹಿತಶಾಹಿ ವ್ಯವಸ್ಥೆಯ ದಬ್ಬಾಳಿಕೆ ದೌರ್ಜನ್ಯಗಳಿಂದ ದಮನಿತ ಸಮುದಾಯಗಳನ್ನು ಮುಕ್ತಗೊಳಿಸಲು ಹೋರಾಡಿದ ಮಹಾನ್ ವ್ಯಕ್ತಿ ಹಾಗೂ ಮೂಢನಂಬಿಕೆ, ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಸಾಮಾಜಿಕ ಅಸಮಾನತೆಯಂತಹ ಅನಿಷ್ಟ ಆಚರಣೆಗಳನ್ನು ತೊಡೆದುಹಾಕಿ ಕಾಯಕ ಸಮಾನತೆ, ಲಿಂಗ ಸಮಾನತೆ ಸಾರಿದವರು ಅಣ್ಣ ಬಸವಣ್ಣನವರು. ದೇವರನ್ನು ಕಾಣಲು ಮಧ್ಯವರ್ತಿಗಳನ್ನು ಸಂಪರ್ಕಿಸಬೇಕಾಗುವಂತಹ ಕಾಲದಲ್ಲಿ ನಿಷ್ಠೆಯ ಕಾಯಕ ಮಾಡುವ ಜೊತೆಗೆ ಮನದಲ್ಲಿಯೇ ದೇವರನ್ನು ಕಾಣಬಹುದು ಎಂದು ತೋರಿಸಿಕೊಟ್ಟರು. ಕಾಯಕದಿಂದ ಬರುವ ಸಂಪತ್ತನ್ನು ತನಗಾಗಿ ಬಳಸುವ ಜೊತೆಗೆ ಸಮಾಜಕ್ಕೂ ಮೀಸಲಿರಿಸಬೇಕು ಎನ್ನುವಂತಹ ದಾಸೋಹದ ಸಿದ್ಧಾಂತವನ್ನು ತಿಳಿಸಿಕೊಟ್ಟು, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯಗಳ ಫಲ ತಲುಪುವಂತೆ ಮಾಡಬೇಕು ಎಂದು ತಳಪಾಯ ಹಾಕಿಕೊಟ್ಟವರು ಜಗಜ್ಯೋತಿ ಬಸವಣ್ಣನವರು, ಹಾಗಾಗಿ ಎಲ್ಲರೂ ಅವರ ತತ್ವ, ಸಿದ್ಧಾಂತಗಳನ್ನು ಅಳವಡಿಸಿಕೊಳ್ಳೋಣ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಎಸ್.ಎ ರವೀಂದ್ರನಾಥ್, ಬಸವಣ್ಣನವರು ಹುಟ್ಟದೇ ಇದ್ದರೆ ಎಲ್ಲರೂ ಕೂಡ ಪ್ರಾಣಿ-ಪಶುಗಳಂತೆ ಜೀವನ ನಡೆಸ ಬೇಕಿತ್ತು, 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸಿ ಎಲ್ಲರಿಗೂ ನ್ಯಾಯ ದೊರಕಿಸಿ ಕೊಡುವ ಜೊತೆಗೆ ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಿ ಸಮಾಜದಲ್ಲಿ ಬೇರೂರಿದ್ದ ಜಾತಿ ವ್ಯವಸ್ಥೆಯನ್ನು ತೊಲಗಿಸಲು ಶ್ರಮಿಸಿದವರು ಬಸವಣ್ಣನವರು ಎಂದು ಹೇಳಿದರು.

ಸನಾವುಲ್ಲಾ ನವಿಲೇಹಾಳ್ ಬಸವಣ್ಣನವರು ಕುರಿತು ವಿಶೇಷ ಉಪನ್ಯಾಸ ನೀಡಿ, ಬಸವಣ್ಣನವರ ವಿಚಾರಗಳು ಎಲ್ಲ ಕಾಲಕ್ಕೂ ಪ್ರಸ್ತುತ, ಕತ್ತಲೆಯಲ್ಲಿದ್ದ ಸಮಾಜಕ್ಕೆ ಜ್ಯೋತಿಯಾಗಿ ಬಂದು ಸಮಾಜವನ್ನು ಶುದ್ಧಗೊಳಿಸುವ ಮೂಲಕ ಕಾಯಕದ ಅರಿವನ್ನು ಮೂಡಿಸಿ, ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಲಿಂಗ ಅಸಮಾನತೆ, ಮೌಢ್ಯದ ವಿರುದ್ಧ ಹೋರಾಟ ಮಾಡಿದವರು ಬಸವಣ್ಣನವರು ಎಂದು ಹೇಳಿದರು.

ಪಾಲಿಕೆ ಮಹಾಪೌರರಾದ ಜಯಮ್ಮ ಗೋಪಿನಾಯ್ಕ್, ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಮಾಜಿ ಮೇಯರ್‌ಗಳಾದ ಬಿ.ಜಿ ಅಜಯ್‌ಕುಮಾರ್, ಎಸ್.ಟಿ ವೀರೇಶ್ ಮಾತನಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎ.ಚನ್ನಪ್ಪ, ಮಹಾನಗರ ಪಾಲಿಕೆ ಉಪಮೇಯರ್ ಗಾಯತ್ರಿಬಾಯಿ, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ನಗರದಲ್ಲಿ ಇಂದು ಬಸವ ಜಯಂತಿ ಬೃಹತ್ ಮೆರವಣಿಗೆ

ಬಸವ ಜಯಂತ್ಯೋತ್ಸವ ಸಮಿತಿ, ವಿರಕ್ತಮಠ ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಬಸವ ಜಯಂತಿಯ ಬೃಹತ್ ಮೆರವಣಿಗೆ ಮತ್ತು ಬಸವ ಜಯಂತ್ಯುತ್ಸವ ಕಾರ್ಯಕ್ರಮ ಇಂದು ನಡೆಯಲಿದೆ.

ಮಧ್ಯಾಹ್ನ 2 ಗಂಟೆಗೆ ವಿರಕ್ತ ಮಠದಿಂದ ಬೃಹತ್ ಮೆರವಣಿಗೆ ಆರಂಭವಾಗಿ, ಮದಕರಿ ನಾಯಕ ವೃತ್ತ, ಕಿತ್ತೂರು ರಾಣಿ ಚನ್ನಮ್ಮ ವೃತ್ತ, ನಗರ ಪಾಲಿಕೆ, ಪ್ರವಾಸಿ ಮಂದಿರ ರಸ್ತೆ ಮೂಲಕ ಸಾಗಿ ಜಯದೇವ ವೃತ್ತದಿಂದ ಶಿವಯೋಗಾಶ್ರಮದಲ್ಲಿ ಮುಕ್ತಾಯ ಗೊಳ್ಳಲಿದೆ.

ಡಾ. ಶಿವಮೂರ್ತಿ ಮುರುಘಾ ಶರಣರು ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಸಂಜೆ 6.30 ಕ್ಕೆ ಶಿವಯೋಗಾಶ್ರಮದಲ್ಲಿ ಬಸವ ಜಯಂತ್ಯುತ್ಸವ ಸಮಾರಂಭವು ಶ್ರೀ ಶಿವಮೂರ್ತಿ ಮುರುಘಾ ಶರಣರ ಅಧ್ಯಕ್ಷತೆಯಲ್ಲಿ ಜರುಗಲಿದ್ದು, ಶ್ರೀ ಬಸವಪ್ರಭು ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ.

ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಭಗೀರಥ ಪೀಠದ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ, ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು, ಯಾದವ ಗುರು ಪೀಠದ ಶ್ರೀ ಕೃಷ್ಣ ಯಾದವಾನಂದ ಸ್ವಾಮಿಗಳು, ಕುಂಚಟಿಗ ಮಹಾಸಂಸ್ಥಾನ ಮಠದ ಡಾ. ಶಾಂತವೀರ ಸ್ವಾಮಿಗಳು, ವಿಜಯಪುರದ ಡಾ. ಬಸವಕುಮಾರ ಸ್ವಾಮಿಗಳು, ಯೋಗಿ ವೇಮನ ಮಹಾಮಠದ ಶ್ರೀ ವೇಮನಾನಂದ ಸ್ವಾಮಿಗಳು, ಮಡಿವಾಳ ಗುರುಪೀಠದ ಶ್ರೀ ಬಸವ ಮಾಚಿದೇವ ಸ್ವಾಮಿಗಳು, ಹಡಪದ ಅಪ್ಪಣ್ಣದೇವ ಗುರುಪೀಠದ ಶ್ರೀ ಅನ್ನದಾನಿ ಭಾರತಿ ಬಸವಪ್ರಿಯ ಅಪ್ಪಣ್ಣ ಸ್ವಾಮಿಗಳು, ಮರುಳಶಂಕರ ದೇವರ ಗುರುಪೀಠದ ಶ್ರೀ ಸಿದ್ಧಬಸವ ಕಬೀರ ಸ್ವಾಮಿಗಳು, ಮೇದಾರ ಗುರುಪೀಠದ ಶ್ರೀ ಇಮ್ಮಡಿ ಬಸವ ಮೇದಾರ ಸ್ವಾಮಿಗಳು ಆಗಮಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಡಾ. ಜಿ.ಎಂ. ಸಿದ್ದೇಶ್ವರ ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮತ್ತಿತರರು ಭಾಗವಹಿಸಲಿದ್ದಾರೆ.

# ಮನುಕುಲದ ಉಳಿವಿಗೆ ಬಸವ ತತ್ವ ಪಾಲನೆ ಅಗತ್ಯ: ಬಸವಪ್ರಭು ಶ್ರೀ



ದಾವಣಗೆರೆ, ಮೇ 3- ವಿಶ್ವದಲ್ಲಿರುವ ಮನುಕುಲದ ಉಳುವಿಗಾಗಿ ಬಸವ ತತ್ವಗಳನ್ನು ಪಾಲಿಸುವ ಅಗತ್ಯವಿದೆ ಎಂದು ಶ್ರೀ ಬಸವಪ್ರಭು ಸ್ವಾಮೀಜಿ ನುಡಿದರು.

ನಗರದ ವಿರಕ್ತ ಮಠದಲ್ಲಿ ಇಂದು ನಡೆದ ಬಸವ ಜಯಂತಿ ಹಾಗೂ ತೊಟ್ಟಿಲೋತ್ಸವ ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು.

ದಯವೇ ಧರ್ಮದ ಮೂಲವಯ್ಯ ಎಂಬ ಬಸವ ತತ್ವವನ್ನು ಪಾಲಿಸಿದಾಗ ಮಾತ್ರ ಸಕಲ ಜೀವರಾಶಿಗಳು ಮತ್ತು ಮನುಕುಲ ಉಳಿಯಲು ಸಾಧ್ಯ. ಇಲ್ಲದಿದ್ದರೆ ಯುದ್ಧ, ಭಯೋತ್ಪಾದಕ ಕೃತ್ಯದ ದಾಳಿಗಳಿಂದ ನಾಶವಾಗುತ್ತಿರುವ ಸಂದರ್ಭಗಳನ್ನು ನೋಡುತ್ತಿದ್ದೇವೆ ಎಂದರು. ಬಸವ ತತ್ವಗಳ ಪಾಲನೆ ಮಾಡಿದರೆ ಪ್ರತಿಯೊಬ್ಬ ಮನುಷ್ಯ ಮಾನವೀಯತೆಯ ಮೂರ್ತಿಯಾಗುತ್ತಾನೆ. ಆಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ ಎಂದು ಹೇಳಿದರು.

ಬಸವ ತತ್ವ ಯಾವುದೇ ಒಂದು ಪ್ರದೇಶ, ರಾಜ್ಯ, ದೇಶಕ್ಕೆ ಸೀಮಿತವಾಗಿಲ್ಲ. ವಿಶ್ವಕ್ಕೆ ಬೇಕಾದ ವಿಶ್ವ ತತ್ವಗಳಾಗಿವೆ. ಕಾಯಕ, ದಾಸೋಹ, ಸಮಾನತೆ, ಇವನಮ್ಮವ ಎಂಬ ವಿಶ್ವಮಾನವತೆ ಪ್ರಜಾಪ್ರಭುತ್ವದ ಪರಿಕಲ್ಪನೆ, ಸ್ತ್ರೀ ಸ್ವಾತಂತ್ರ್ಯ ಮುಂತಾದ ತತ್ವಗಳನ್ನು ನೀಡಿದ ಬಸವಣ್ಣ, ಜಗತ್ತಿನ ಶ್ರೇಷ್ಠ ತತ್ವಜ್ಞಾನಿಗಳಾಗಿದ್ದಾರೆ ಎಂದು ಬಣ್ಣಿಸಿದರು.

ಮಕ್ಕಳಿಗೆ ಉತ್ತಮ ಸಂಸ್ಕಾರ, ಸಂಸ್ಕೃತಿಗಳನ್ನು ಕಲಿಸಿದಾಗ ಮಾತ್ರ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಿ ಬಾಳಲು ಸಾಧ್ಯ ಎಂದು ಹೇಳಿದರು.

ಇದೇ ವೇಳೆ ನವಜಾತ ಶಿಶುಗಳಿಗೆ ಬಸವಣ್ಣ, ಚನ್ನಬಸವಣ್ಣ, ಜಯದೇವ, ಶಿವಯೋಗಿ, ವಚನ, ಭಕ್ತಿ, ಅಕ್ಕಮಹಾದೇವಿ, ಸತ್ಯಕ್ಕ ಮುಂತಾದ ಬಸವಾದಿ ಪ್ರಮಥರ ಹೆಸರುಗಳನ್ನು ಇಡಲಾಯಿತು.

ಬೆಳಿಗ್ಗೆ ನಡೆದ ಬಸವ ಪ್ರಭಾತ್ ಪೇರಿ ಕಾರ್ಯಕ್ರಮಕ್ಕೆ ಅಮೆರಿಕಾದ ಉದ್ಯಮಿ ಭರತಕುಮಾರ್ ಚಾಲನೆ ನೀಡಿದರು. ಬಸವ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಿ.ಜೆ. ಅಜಯಕುಮಾರ್, ಇತರೆ ಪದಾಧಿಕಾರಿಗಳಾದ ಕಣಕುಪ್ಪಿ ಮುರುಗೇಶ್, ಸೋಗಿ ಶಾಂತಕುಮಾರ್, ಎಂ.ಕೆ. ಬಕ್ಕಪ್ಪ, ಲಂಬಿ ಮುರುಗೇಶಪ್ಪ, ಹಾಸಬಾವಿ ಕರಿಬಸಪ್ಪ, ಶಶಿಧರ್, ಮಹದೇವಮ್ಮ, ದಾಕ್ಷಾಯಿಣಮ್ಮ, ಚೇತನ, ವಿಭೂತಿ ಬಸವಾನಂದರು ಮುಂತಾದವರಿದ್ದರು.

## ವಿಶ್ವಕರ್ಮದಿಂದ ಸಾಮೂಹಿಕ ಉಪನಯನ, ವಿವಾಹ

ದಾವಣಗೆರೆ, ಮೇ 3- ವಿಶ್ವಕರ್ಮ ಸಮಾಜ ಸಂಘದಿಂದ ಇದೇ ದಿನಾಂಕ 11ರಿಂದ 13 ರವರೆಗೆ ಸಾಮೂಹಿಕ ಉಪನಯನ, ವಿವಾಹ ಮಹೋತ್ಸವವು ನಗರದ ಶ್ರೀ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ವಿವರಕ್ಕೆ ಇದೇ ದಿನಾಂಕ 10 ರೊಳಗಾಗಿ ಕಾಳಿಕಾಂಬ ಕಲ್ಯಾಣ ಮಂಟಪ (ಮೊ.9731870799) ದಲ್ಲಿ ಹೆಸರು ನೋಂದಾಯಿಸಬಹುದು.

## ಹೊನ್ನಾಳಿಯ ಈದ್ಗಾ ಮೈದಾನದಲ್ಲಿ ಸಂಭ್ರಮದ ರಂಜಾನ್



ಹೊನ್ನಾಳಿ, ಮೇ 3- ನಗರದ ದುರ್ಗಿಗುಡಿ ಉತ್ತರ ಭಾಗದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಬಿಳಿ ಬಟ್ಟೆ ತೊಟ್ಟು ಪವಿತ್ರ ರಂಜಾನ್ ಹಬ್ಬದ ದಿನ ಶಾಂತಿ ಭಾವೈಕ್ಯತೆಗಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಒಬ್ಬರಿಗೊಬ್ಬರು ಆಲಂಗಿಸಿದರು.

ಸಾಮೂಹಿಕ ಪ್ರಾರ್ಥನೆ ಸಂದರ್ಭದಲ್ಲಿ ಮುಸ್ಲಿಂ ಗುರು ಸೈಯ್ಯದ್ ಇಸ್ಮಾಯಿಲ್ ಪ್ರಾರ್ಥನೆ ಸಲ್ಲಿಸಿದರು. ಮಸೀದಿ ಅಧ್ಯಕ್ಷ ಹಬೀಬುಲ್ಲಾಸಾಬ್, ಕಾರ್ಯದರ್ಶಿ ಸಮಿಉಲ್ಲಾ, ಉಪಾಧ್ಯಕ್ಷ ಬಾಬುಲಾಲ್, ಅಬ್ದುಲ್ ಜಬ್ಬಾರ್‌ಸಾಬ್, ನಜೀರ್ ಅಹ್ಮದ್, ಅಲ್ತಾಫ್‌ಅಹ್ಮದ್, ಬಾಷಾಸಾಬ್, ಲಿಯಾಖತ್‌ಖಾನ್, ಸಮಿವುಲ್ಲಾ ನವಾಬ್, ಜಾವೀದ್ ಇತರರು ಇದ್ದರು.

## ಕ್ರಾಂತಿಯ ರೂವಾರಿ ಬಸವಣ್ಣ : ಶಾಸಕ ರಾಮಚಂದ್ರ

**(3ನೇ ಪುಟದಿಂದ)** ಸಿದ್ದಪ್ಪ, ಕಾಂಗ್ರೆಸ್ ಮುಖಂಡರಾದ ದೇವೇಂದ್ರಪ್ಪ. ಕೆ.ಪಿ ಪಾಲಯ್ಯ, ವೀರಶೈವ ಸಮಾಜದ ಮುಖಂಡರಾದ ಶಿವನಗೌಡ ಎಂ.ಎಸ್. ಪಾಟೀಲ್. ಮಾಜಿ ಜಿಪಂ ಸದಸ್ಯ ಎಸ್.ಕೆ. ಮಂಜುನಾಥ್, ನಿವೃತ್ತ ಶಿಕ್ಷಕ ಕೃಷ್ಣಮೂರ್ತಿ, ಕಾನನಕಟ್ಟೆ ತಿಪ್ಪೇಸ್ವಾಮಿ, ವೈ.ಎನ್. ಮಂಜುನಾಥ್, ಸಿದ್ದೇಶ್, ಶಿವಕುಮಾರ ಸ್ವಾಮಿ, ಹನುಮಂತಪ್ಪ, ಪಟ್ಟಣ ಪಂಚಾಯತಿ ಸದಸ್ಯರಾದ ದೇವರಾಜ್, ಪಾಪಲಿಂಗಪ್ಪ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಬಿ. ಮಹೇಶ್ವರಪ್ಪ, ಪ.ಪಂ. ಮುಖ್ಯಾಧಿಕಾರಿ ಲೋಕ್ಯಾ ನಾಯ್ಕ್, ವೆಂಕಟೇಶಮೂರ್ತಿ, ರುದ್ರಪ್ಪ, ಶ್ರೀನಿವಾಸಲು ಮತ್ತಿತರರು ಭಾಗವಹಿಸಿದ್ದರು.

## ನಗರದ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಇಂದು ವಿಶೇಷ ಪೂಜೆ



ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ಉತ್ಸವಮೂರ್ತಿ ಸಮೇತ ಸೇವಾಕರ್ತ ದಂಪತಿಗಳಿಗೆ ತುಲಾಭಾರ ಏರ್ಪಡಿಸಲಾಗಿದೆ.

ವಾಸವಿ ಜಯಂತಿ ಪೂಜೆ, ಅಮ್ಮನವರಿಗೆ ಅಲಂಕಾರ ಸೇವೆ ಮತ್ತು ಪ್ರಸಾದ ವಿನಿಯೋಗವಿರುತ್ತದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ.

ಸಂಜೆ 5 ರಿಂದ ವಾಸವಿ ಭಜನಾ ಮಂಡಳಿಯವರು ಲಕ್ಷ್ಮಿ ನರಸಿಂಹ ಸಹಸ್ರ ನಾಮ ಸ್ತೋತ್ರ ಪಠಣ ಮಾಡಲಿದ್ದಾರೆ.

## ನಗರದಲ್ಲಿ ಮಕ್ಕಳಿಗೆ ಬೇಸಿಗೆ ಶಿಬಿರ

ದಾವಣಗೆರೆ, ಮೇ 3- ಅನ್ವೇಷಕರು ಆರ್ಟ್ ಫೌಂಡೇಶನ್ ವತಿಯಿಂದ ಇದೇ ದಿನಾಂಕ 8 ರಂದು ಮಕ್ಕಳ ಸಂತೆ ಸ್ಪರ್ಧೋತ್ಸವವನ್ನು 10 ರಿಂದ 16 ವರ್ಷದ ಮಕ್ಕಳಿಗೆ ಸಾರ್ವತ್ರಿಕ ಬೇಸಿಗೆ ಶಿಬಿರದ ಪ್ರಯುಕ್ತ ಹಮ್ಮಿಕೊಂಡಿದೆ. ಅತ್ಯುತ್ತಮವಾಗಿ ವ್ಯವಹಾರ ಮಾಡುವ ಮಕ್ಕಳಿಗೆ ಪ್ರಥಮ, ದ್ವಿತೀಯ, ತೃತೀಯ ನಗದು ಬಹುಮಾನ ಕೊಡಲಾಗುವುದು.

ವಿವರಕ್ಕೆ ಮೊ: 98442 68176ಗೆ ಕರೆ ಮಾಡಬಹುದು. ಪಿ.ಜೆ. ಬಡಾವಣೆಯ ಬಿ.ಇ.ಎ. ಪ್ರೌಢಶಾಲೆಯಲ್ಲಿ ಈ ಶಿಬಿರ ನಡೆಯುವುದು. ಮೇ 10 ರಂದು ಶಿಬಿರದ ಸಮಾರೋಪದಲ್ಲಿ ಸಂಗೀತ ನಿರ್ದೇಶಕ ವಿ. ಮನೋಹರ್ ಅವರಿಂದ ಪ್ರಶಸ್ತಿ ನೀಡಲಾಗುವುದು ಎಂದು ಆರ್ಟ್ ಫೌಂಡೇಶನ್‌ನ ಸಿದ್ಧರಾಜು ಎಸ್.ಎಸ್. ತಿಳಿಸಿದ್ದಾರೆ.

# ಮನುಷ್ಯ ಅಹಂಕಾರ ಬಿಟ್ಟರೆ ಸಾಮರಸ್ಯದ ಬದುಕು ಸಾಧ್ಯ

## ಪಾಂಡೋಮಟ್ಟಿ - ಕಮ್ಮತ್ತಹಳ್ಳಿ ವಿರಕ್ತ ಮಠದ ಡಾ. ಗುರುಬಸವ ಸ್ವಾಮೀಜಿ ಪ್ರತಿಪಾದನೆ



ದಾವಣಗೆರೆ, ಮೇ 3- ದಯೆಯಿಂದ ಕೂಡಿರುವುದೇ ಧರ್ಮ. ಹಿಂಸೆಯಿಂದ ಕೂಡಿರುವುದು ಧರ್ಮವಲ್ಲ. ದಯೆ ಧರ್ಮದ ಮೂಲ. ಧರ್ಮದ ತಳಹದಿ ದಯೆ ಎಂದು ಪಾಂಡೋಮಟ್ಟಿ - ಕಮ್ಮತ್ತಹಳ್ಳಿ ವಿರಕ್ತ ಮಠದ ಡಾ. ಗುರುಬಸವ ಸ್ವಾಮೀಜಿ ಹೇಳಿದರು.

ನಗರದ ಆಂಜನೇಯ ಬಡಾವಣೆಯ ನಾಗರಿಕರ ಹಿತರಕ್ಷಣಾ ವೇದಿಕೆ ಕಚೇರಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ ಹಾಗೂ ಆಂಜನೇಯ ಬಡಾವಣೆ ನಾಗರಿಕರ ಹಿತರಕ್ಷಣಾ ವೇದಿಕೆ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ ಹಮ್ಮಿಕೊಂಡಿದ್ದ ಬಸವ ಜಯಂತಿ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಆದರೆ ಈಗ ಧರ್ಮದ ಹಿಂದೆ ಭಯದ ವಾತಾವರಣ ಇದೆ. ಎಂಥ ಅನಾಹುತ ಆಗಬಹುದೆಂಬ ಚಿಂತಾಕ್ರಾಂತರಾಗುವ ಸನ್ನಿವೇಶ ನಿರ್ಮಾಣವಾಗುತ್ತಿದೆ. ಅಪ್ಯಾಯಮಾನವನ್ನು ದೂರೀಕರಿಸುವ ವ್ಯವಸ್ಥಿತವಾದ ಸಂಚು ನಡೆಯುತ್ತಿವೆ. ಬಸವ ತತ್ವಗಳ ಮೊರೆ ಹೋದರೆ ಮಾತ್ರ ಶಾಂತಿ, ನೆಮ್ಮದಿ, ತೃಪ್ತಿದಾಯಕ ಜೀವನ ನಡೆಸಲು ಸಾಧ್ಯ ಎಂದು ಹೇಳಿದರು.

ಮಹಿಳೆಯರಿಗೆ ಮನ್ನಣೆ ಕೊಟ್ಟ ಮಹಾನುಭವ ಮತ್ತು ಮಹಿಳಾ ಸಮಾನತೆಗೆ ಹೋರಾಡಿದ ಮಹಾಪುರುಷ ಬಸವಣ್ಣ. ಇವತ್ತು ಮಹಿಳೆ ಯಾರನ್ನಾದರೂ ಮರೆಯಬಹುದು. ಆದರೆ ಬಸವಣ್ಣನವರನ್ನು ಮರೆತರೆ ಭವಿಷ್ಯವೇ ಇಲ್ಲ ಎಂದರು.

ಕನ್ನಡ ಪ್ರಥಮ ಭಾಷೆಯಾಗಬೇಕು. ಹೃದಯ ಭಾಷೆಯಾಗಬೇಕೆಂಬ ಆಶಯದೊಂದಿಗೆ ಕನ್ನಡದಲ್ಲೇ ಶ್ರೇಷ್ಠ ವಚನಗಳನ್ನು ಬರೆದವರು ಬಸವಣ್ಣ. ವಚನಗಳು ಜನಸಾಮಾನ್ಯರಿಗೆ ಅಪ್ಯಾಯಮಾನವಾಗಿವೆ ಎಂದು ಹೇಳಿದರು.

ಮಕ್ಕಳಿಗೆ ಸಂಸ್ಕಾರವನ್ನು ಕಲಿಸಿದರೆ ವಯಸ್ಸಾದ ತಂದೆ-ತಾಯಿಯರನ್ನು ಅನಾಥಾಶ್ರಮ ಅಥವಾ ವೃದ್ಧಾಶ್ರಮಕ್ಕೆ ಕಳಿಸುವ ಪ್ರಮೇಯವೇ ಬರುವುದಿಲ್ಲ. ಆದ್ದರಿಂದ ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿಯನ್ನು ಕಲಿಸುವಂತೆ ಕರೆ ನೀಡಿದರು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿ ಕಾರಿ ಡಾ. ಎ. ಚನ್ನಪ್ಪ ಅವರು 'ಸಮಾಜ ಸುಧಾರಣೆಯಲ್ಲಿ ಬಸವಣ್ಣನವರ ಪಾತ್ರ ಅಂದು-ಇಂದು' ವಿಷಯ ಕುರಿತು ಮಾತನಾಡಿ, ಭೂಲೋಕವನ್ನು ದೇವಲೋಕವನ್ನಾಗಿ ಪರಿವರ್ತಿಸಿದ ಬಸವಣ್ಣನವರೇ 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ಹೇಳಿದ್ದಾರೆ. ಬಸವಣ್ಣನವರು ಅನುಭವ ಮಂಟಪ ಸ್ಥಾಪನೆ ಮಾಡದಿದ್ದರೆ, ಮಹಾಮನೆ ಕಲ್ಪನೆ ಕೊಡದಿದ್ದರೆ ಅವರ ದರ್ಶನ ಇಂದು ಆಗುತ್ತಿರಲಿಲ್ಲ ಎಂದರು.

ಬಸವಣ್ಣನವರ ಬಗ್ಗೆ ಅನೇಕ ಸಂಶೋಧನೆಗಳು, ಅವರ ವಚನಗಳ ಅಧ್ಯಯನಗಳು ಸಹ ನಡೆಯುತ್ತಿವೆ. ಬಡತನ, ಹಸಿವು, ಅಜ್ಞಾನ ಎಲ್ಲವೂ ಕೂಡ ಇವೆ ಇವೆಲ್ಲವನ್ನೂ ಮೆಟ್ಟಿ ನಿಲ್ಲುವ ಮಾರ್ಗವನ್ನು ಬಸವಣ್ಣನವರು ಹಾಕಿ ಕೊಟ್ಟಿದ್ದಾರೆ ಎಂದು ಹೇಳಿದರು.

ಮನುಷ್ಯ ಅಹಂಕಾರ ಬಿಟ್ಟರೆ ಸಾಮರಸ್ಯದ ಬದುಕು ಸಾಧ್ಯವಾಗುತ್ತದೆ. ಲಿಂಗ ಸಮಾನತೆ ಬಗ್ಗೆ ಎಲ್ಲೆಡೆ ಚರ್ಚೆಗಳಾಗುತ್ತಿವೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಸ್ತ್ರೀ ಸ್ವಾತಂತ್ರ್ಯಕ್ಕೆ ಅಡಿಪಾಯ ಹಾಕಿದವರೇ ಬಸವಣ್ಣನವರು. ಕಂದಾಚಾರ, ಮೂಢನಂಬಿಕೆಗಳನ್ನು ನಿರ್ಮೂಲನೆ ಮಾಡುವಲ್ಲಿ ಅವರ ವಚನಗಳು ಸಹಕಾರಿಯಾಗಿವೆ. ಬಸವಣ್ಣನವರ ಅನುಭವ ಮಂಟಪದ ಮಾದರಿಯೇ ಇಂದಿನ ಪಾರ್ಲಿಮೆಂಟ್ ಆಗಿದೆ ಎಂದರು.

ವಿಶ್ವಗುರು ಸ್ಥಾನದಲ್ಲಿರುವ ಏಕೈಕ ದೇಶ ಭಾರತ. ಅನೇಕ ಋಷಿಮುನಿಗಳು, ಸಾಧು ಸಂತರು, ವಚನಕಾರರು ಶ್ರೇಷ್ಠ ಸಂಸ್ಕೃತಿಯನ್ನು ನೀಡುವ ಮೂಲಕ ವಿಶೇಷ ಕೊಡುಗೆಯನ್ನು ನೀಡಿದ್ದಾರೆಂದರು.

ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಕುಸುಮ ಲೋಕೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಹಾನಗರ ಪಾಲಿಕೆ ಸದಸ್ಯೆ ವೀಣಾ ನಂಜಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಸದಸ್ಯ ಸಂತೇಬೆನ್ನೂರು ಕೆ. ಸಿರಾಜ್ ಅಹ್ಮದ್, ಕದಳಿ ಮಹಿಳಾ ವೇದಿಕೆ ಗೌರವಾಧ್ಯಕ್ಷೆ ಸಾವಿತ್ರಮ್ಮ ಬಿ.ಕೆ. ಸಿದ್ದಪ್ಪ, ದತ್ತಿ ದಾನಿಗಳಾದ ಮಂಜುಳ ಡಾ. ಮಂಜುನಾಥ ಗೌಡ ಮತ್ತಿತರರು ಉಪಸ್ಥಿತರಿದ್ದರು.

ನಿವೃತ್ತ ಪ್ರಾಂಶುಪಾಲರಾದ ಕೆ.ಎಸ್. ಈಶ್ವರಪ್ಪ ಸ್ವಾಗತಿಸಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ರುದ್ರೇಗೌಡ, ಗುರುಬಸವರಾಜ್ ಅನಿಸಿಕೆ ವ್ಯಕ್ತಪಡಿಸಿದರು.

## ನೈಟ್‌ಕ್ಲಬ್ ವಿಡಿಯೋಗೆ ಸಮರ್ಥನೆ

**(3ನೇ ಪುಟದಿಂದ)** ರಾಹುಲ್ ಗಾಂಧಿ ಪಾಲ್ಗೊಂಡಿದ್ದಾರೆ. ಸಿ.ಎನ್.ಎನ್. ಮಾಜಿ ವರದಿಗಾರ್ತಿಯಾದ ಸುಮ್ನಿಮಾ ಅವರು ನಿಮಾ ಮಾರ್ಟಿನ್ ಶೆರ್ಪಾ ಜೊತೆ ಮದುವೆಯಾಗುತ್ತಿದ್ದಾರೆ.

ರಾಹುಲ್ ನೈಟ್‌ಕ್ಲಬ್‌ನಲ್ಲಿರುವ ವಿಡಿಯೋ ಹಂಚಿಕೊಂಡಿದ್ದ ಬಿಜೆಪಿ ಮಾಧ್ಯಮ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, ಈ ಹಿಂದೆ ಮುಂಬೈ ಮೇಲೆ ಉಗ್ರವಾದಿ ದಾಳಿ ನಡೆದಾಗ ರಾಹುಲ್ ಗಾಂಧಿ ನೈಟ್‌ಕ್ಲಬ್‌ನಲ್ಲಿದ್ದರು. ಅವರ ಪಕ್ಷ ಕುಸಿಯುತ್ತಿರುವಾಗ ನೈಟ್‌ಕ್ಲಬ್‌ನಲ್ಲಿದ್ದಾರೆ. ಅವರು ನಿಲುವು ಸ್ಥಿರವಾಗಿದೆ ಎಂದಿದ್ದಾರೆ.

ಆಸಕ್ತಿಕರ ಅಂಶವೆಂದರೆ ಕಾಂಗ್ರೆಸ್ ಪಕ್ಷವು ತನ್ನ ಅಧ್ಯಕ್ಷ ಸ್ಥಾನವನ್ನು ಹೊರಗುತ್ತಿಗೆ ನೀಡಲು ನಿರಾಕರಿಸಿದ ಬೆನ್ನಲ್ಲೇ ಆ ಪಕ್ಷದ ಪ್ರಧಾನ ಮಂತ್ರಿ ಅಭ್ಯರ್ಥಿ ವಿರುದ್ಧ ಗುರಿ ಇಡಲಾಗುತ್ತಿದೆ ಎಂದು ಮಾಳವೀಯ ಹೇಳಿದ್ದಾರೆ.

## ಮಾಯಕೊಂಡ ಕ್ಷೇತ್ರದಲ್ಲಿ 10 ಕೋಟಿ ರೂ. ಕಾಮಗಾರಿಗೆ ಸಂಸದರ ಚಾಲನೆ



ದಾವಣಗೆರೆ, ಮೇ 3- ಮಾಯಕೊಂಡ ವಿಧಾನಸಭಾ ಕ್ಷೇತ್ರದಲ್ಲಿ 10 ಕೋಟಿ ರೂ. ಮೊತ್ತದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು. ಸಂಸದ ಜಿ. ಎಂ. ಸಿದ್ದೇಶ್ವರ, ಶಾಸಕ ಪ್ರೊ.ಲಿಂಗಣ್ಣ, ಬಯಲು ಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎನ್.ಇ. ಜೀವನ್‌ಮೂರ್ತಿ, ಮಾಜಿ ಶಾಸಕ ಎಂ. ಬಸವರಾಜ ನಾಯ್ಕ, ಜಿಲ್ಲಾ ಅಭಿವೃದ್ಧಿ ಪರಿಶೀಲನಾ ಸಮಿತಿ ಸದಸ್ಯ ಎಚ್.ಕೆ.ಬಸವರಾಜ್, ಬಿಜೆಪಿ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ದೇವೇಂದ್ರಪ್ಪ, ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಹನುಮಂತ ನಾಯ್ಕ, ಎಸ್ಸಿ ಮೋರ್ಚಾ ಕೋಶಾಧ್ಯಕ್ಷ ಅನಿಲ್ ನಾಯ್ಕ, ಮುಖಂಡರಾದ ಅಣಜಿ ಗುಡ್ಡೇಶ್, ಆಲೂರು ನಿಂಗರಾಜ್, ಆಲೂರು ಚನ್ನಬಸಪ್ಪ, ಐಗೂರು ತಿಪ್ಪೇಸ್ವಾಮಿ, ಕರಿಲಕ್ಕೇನಹಳ್ಳಿ ಓಂಕಾರಪ್ಪ, ಗಂಗಾಧರ ನಾಯ್ಕ, ಮಾಯಕೊಂಡ ಅಶೋಕ್, ಬಸವಾಪುರ ಸುರೇಂದ್ರಪ್ಪ ಮತ್ತಿತರರಿದ್ದರು.

**LITTLE CHAMPS SCHOOL**
Wanted Ladies Teachers
(With English Fluency)
NTC - 2 Post, B.Ed - 2 Post, D.Ed - 2 Post
are Interested in Teaching of Any Degree.
Admissions are Opened 2022-2023
For PG, LKG, UKG, 1st to 5th Classes
Contact : DCM Township Near Def & Dumb School
M : 98444 99943, 84537 55080

# ಮಾದರಿ ಸಮಾಜ ನಿರ್ಮಿಸಿದ ಮಹಾನ್ ಚೇತನ ಬಸವಣ್ಣ





ದಾವಣಗೆರೆ, ಮೇ 3- ಇವನಾರವ.. ಇವನಾರವ.. ಎನ್ನದೆ ಎಲ್ಲರೂ ನಮ್ಮವರೇ ಎಂದು ಮಾದರಿ ಸಮಾಜ ನಿರ್ಮಿಸಿದ ಮಹಾನ್ ಚೇತನ ಬಸವಣ್ಣ ಎಂದು ನಗರ ಪೊಲೀಸ್ ಉಪಾಧೀಕ್ಷಕ ನರಸಿಂಹ ತಾಮ್ರಧ್ವಜ ಹೇಳಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ಇಂದು ಸಂಜೆ ಹಮ್ಮಿಕೊಳ್ಳಲಾಗಿದ್ದ ವಿರಕ್ತಮಠಾಧೀಶರಾದ ಲಿಂ. ಶ್ರೀ ಮೃತ್ಯುಂಜಯ ಅಪ್ಪಗಳವರ ಹಾಗೂ ಕರ್ನಾಟಕದ ಗಾಂಧಿ ಲಿಂ. ಶ್ರೀ ಹರ್ಡೇಕರ್ ಮಂಜಪ್ಪನವರ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವೈಚಾರಿಕ ತಳಹದಿಯ ಮೇಲೂ ಭಗವಂತನ ದರ್ಶನ ಮಾಡುವ ವ್ಯವಸ್ಥೆ ಕಂಡ ವೀರಶೈವ ಧರ್ಮದ ಬಗ್ಗೆ ಡಾ.ಅಂಬೇಡ್ಕರ್ ಸಹ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಇಂದು ಬಸವಣ್ಣನವರ ತತ್ವಗಳನ್ನು ಎಲ್ಲರೂ ಪಾಲಿಸಿದ್ದೇ ಆದಲ್ಲಿ ರಾಮ ರಾಜ್ಯವಾಗುವುದರಲ್ಲಿ ಸಂಶಯವಿಲ್ಲ ಎಂದರು.

ದಾವಣಗೆರೆ ಜನರು ಕಾಯಕದಲ್ಲಿ ಶ್ರದ್ಧೆಯುಳ್ಳವರಾಗಿರುವುದರಿಂದ ಇತರೆ ಜಿಲ್ಲೆ, ರಾಜ್ಯಗಳಿಗೆ ಹೋಲಿಸಿದರೆ ಇಲ್ಲಿ ಶಾಂತಿ-ಸಾಮರಸ್ಯದ ವಾತಾವರಣವಿದೆ. ಇದಕ್ಕೆ ಮಠ-ಮಾನ್ಯಗಳೂ ಕಾರಣವಾಗಿವೆ ಎಂದರು. ನಾಗರಿಕರ ಸುರಕ್ಷತೆಗಾಗಿ ಪೊಲೀಸ್ ಇಲಾಖೆ ಸದಾ ಸಿದ್ಧವಾಗಿದ್ದು, ಸಾರ್ವಜನಿಕರಿಗೆ ಪೊಲೀಸ್ ಅಗತ್ಯತೆ ಬಿದ್ದಲ್ಲಿ 112ಕ್ಕೆ ಸಂಪರ್ಕಿಸುವಂತೆ ಹೇಳಿದರು.

**ವಿರಕ್ತಮಠಾಧೀಶರಾದ ಲಿಂ.ಶ್ರೀ ಮೃತ್ಯುಂಜಯ ಅಪ್ಪಗಳವರ ಹಾಗೂ ಕರ್ನಾಟಕದ ಗಾಂಧಿ ಲಿಂ. ಶ್ರೀ ಹರ್ಡೇಕರ್ ಮಂಜಪ್ಪನವರ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಡಿವೈಎಸ್ಪಿ ತಾಮ್ರಧ್ವಜ**

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರೂ, 'ಜನತಾವಾಣಿ' ಉಪ ಸಂಪಾದಕರೂ ಆದ ಇ.ಎಂ. ಮಂಜುನಾಥ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಧಾರ್ಮಿಕ ಚಿಂತನೆಗಳು ಕಡಿಮೆಯಾಗುತ್ತಿವೆ. ಬಸವ ಜಯಂತಿ, ಬಸವ ಪ್ರಭಾತ್ ಪೇರಿಯಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಧಾರ್ಮಿಕ ಚಿಂತನೆ ಬೆಳೆಸುವಲ್ಲಿ ಸಹಕಾರಿಯಾಗಿವೆ ಎಂದರು.

ಬಸವ ಪ್ರಭಾತ್ ಪೇರಿಯೇ ನನಗೆ ಪ್ರೇರಣೆಯಾಗಿತ್ತು. 1978 ರಿಂದ 1990ರವರೆಗೆ ನನ್ನ ವಿದ್ಯಾರ್ಥಿ ಜೀವನದಲ್ಲಿ ಪ್ರತಿ ವರ್ಷ ನಡೆಯುವ ಪ್ರಭಾತ್ ಪೇರಿಯಲ್ಲಿ ಪಾಲ್ಗೊಂಡು ಧಾರ್ಮಿಕ ಚಿಂತನೆಗಳನ್ನು ಅಳವಡಿಸಿಕೊಂಡಿದ್ದರಿಂದಲೇ ಇಂದು ಸಮಾಜದಲ್ಲಿ ಉತ್ತಮ ಸ್ಥಾನಮಾನ ಪಡೆಯಲು ಸಹಕಾರಿಯಾಗಿದೆ ಎಂದು ಹೇಳಿದರು.

ವಿದ್ಯೆಯ ಜೊತೆ ಮಕ್ಕಳಲ್ಲಿ ಧಾರ್ಮಿಕ ಚಿಂತನೆಗಳನ್ನು ಬಿತ್ತುವುದೂ ಸಹ ಅಗತ್ಯವಾಗಿದೆ. ಸಮಾಜದಲ್ಲಿ ಮಕ್ಕಳ ನಡೆ-ನುಡಿಯೂ ಮುಖ್ಯವಾಗಿರುತ್ತದೆ. ಆದ್ದರಿಂದ ಪ್ರತಿ ಪೋಷಕರೂ ತಮ್ಮ ಮಕ್ಕಳನ್ನು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕು. ಆಗ ಅವರು ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬಾಳುತ್ತಾರೆ ಎಂದು ಹೇಳಿದರು.

ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ ಮಾತನಾಡಿ, ಜಾತಿ-ಧರ್ಮಗಳ ಕಾರಣಕ್ಕಾಗಿ ಮನಸ್ಸುಗಳನ್ನು ಒಡೆಯುತ್ತಿರುವ ಸಂದರ್ಭದಲ್ಲಿ ರಂಜಾನ್ ಹಾಗೂ ಬಸವ ಜಯಂತಿ ಆಚರಣೆ ಒಂದೇ ದಿನ ಬಂದಿದ್ದು, ಇದೊಂದು ಭಾವೈಕ್ಯತಾ ದಿನವಾಗಿದೆ ಎಂದು ಹೇಳಿದರು.

ಹನ್ನೆರಡನೇ ಶತಮಾನದಲ್ಲಿಯೇ ಅನುಭವ ಮಂಟಪ ಸ್ಥಾಪಿಸಿ, ಎಲ್ಲರಿಗೂ ಸಮಾನತೆ ನೀಡಿದವರು ಬಸವಣ್ಣ, ಅಂದಿನ ಸಂವಿಧಾನಕ್ಕೂ ಇಂದಿನ ಸಂವಿಧಾನಕ್ಕೂ ಸಾಕಷ್ಟು ಸಾಮ್ಯತೆ ಇದೆ. ಇಂದು ದೇಶದಲ್ಲಿ ಸಾಮರಸ್ಯ ಇದೆ ಎಂದರೆ ಅದು ಬಸವಣ್ಣನಂತಹ ಮಹಾನ್ ಪುರುಷರಿಂದಾಗಿಯೇ ಎಂದು ಹೇಳಿದರು.

ಪ್ರಸ್ತುತ ದಿನಗಳಲ್ಲಿ ಮೊಬೈಲ್ ಗಳಿಂದಾಗಿ ಮಕ್ಕಳು ದಿಕ್ಕು ತಪ್ಪುತ್ತಿದ್ದಾರೆ. ಮೊಬೈಲ್ ಗಳ ಬದಲಿಗೆ ಮಕ್ಕಳಲ್ಲಿ ವಚನ ಸಾಹಿತ್ಯವನ್ನು ಬಿತ್ತಬೇಕು ಎಂದು ಬಸವಂತಪ್ಪ ಕರೆ ನೀಡಿದರು.

ಸಮಾಜ ಸೇವಕ ನಸೀರ್ ಅಹ್ಮದ್ ಮಾತನಾಡಿ, ವಿರಕ್ತ ಮಠವು ಸಾಮರಸ್ಯ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಿದೆ ಎಂದರು.

ಬಸವ ಬಳಗದ ಅಗಡಿ ಮಹಾಂತೇಶ್ ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಜನ್ಮ ಶತಮಾನೋತ್ಸವದ ಸಂಭ್ರಮದಲ್ಲಿರುವ ಬಸವ ಬಳಗದ ವಿ.ಸಿದ್ದರಾಮಣ್ಣನವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಬಸವಾದಿ ಶರಣರ ವೇಷಭೂಷಣ ಸ್ಪರ್ಧೆ ನಡೆಯಿತು. ಕಾರ್ಯಕ್ರಮದ ನಂತರ ರಂಗ ಅನಿಕೇತನ ದಾವಣಗೆರೆ ಅಭಿನಯದ, ದೇವರಾಜ ಮಳೆಹಳ್ಳಿ ನಿರ್ದೇಶನ ಹಾಗೂ ವ್ಯಾಸ ದೇಶಪಾಂಡೆ ರಚಿತ 'ಇವ ನಮ್ಮವ' ನಾಟಕ ಪ್ರದರ್ಶನಗೊಂಡಿತು.



## ಶಿರಮಗೊಂಡನಹಳ್ಳಿಯಲ್ಲಿ ಸಂಭ್ರಮದ 'ಬಸವ ಜಯಂತಿ'

ಶ್ರೀ ಬಸವೇಶ್ವರ ಜಯಂತ್ಯೋತ್ಸವದ ಅಂಗವಾಗಿ ಶಿರಮಗೊಂಡನಹಳ್ಳಿಯಲ್ಲಿ ಜರುಗಿದ ಮೆರವಣಿಗೆಯಲ್ಲಿ ಬಸವಾದಿ ಶಿವ ಶರಣರ ವೇಷಭೂಷಣದೊಂದಿಗೆ ಗಮನ ಸೆಳೆದ ಮಕ್ಕಳು...

## ಹಳೇದೇವರ ಹೊನ್ನಾಳಿ ಗ್ರಾಮದಲ್ಲಿ ನೂತನ ರಥ



ಹೊನ್ನಾಳಿ ತಾಲ್ಲೂಕಿನ ಹಳೇದೇವರ ಹೊನ್ನಾಳಿ ಗ್ರಾಮದಲ್ಲಿ ನಾಳೆ ಗುರುವಾರ ಲೋಕಾರ್ಪಣೆಗೊಳ್ಳಲಿರುವ ಜಗದ್ಗುರು ಶ್ರೀ ರಾಮಾನುಜಾಚಾರ್ಯರ ನೂತನ ರಥ. ಹಳೇದೇವರ ಹೊನ್ನಾಳಿ ಗ್ರಾಮದ ಶ್ರೀ ರಾಮಾನುಜಾಚಾರ್ಯರ ಮಠದ ಗುರುಗಳಾದ ಎಸ್.ಕೆ.ಗೋಪಾಲಯ್ಯ, ಪುರೋಹಿತರು, ರಥದ ಶಿಲ್ಪಿಗಳು ಉಪಸ್ಥಿತರಿದ್ದರು.

## ನಗರದ ಕಾಯಿಪೇಟೆಯಲ್ಲಿ ಇಂದು ಅನ್ನ ಸಂತರ್ಪಣೆ

ಕಾಯಿಪೇಟೆಯ ಶ್ರೀ ಬಸವೇಶ್ವರ ನಗರದ ವತಿಯಿಂದ ನಡೆದ ಶ್ರೀ ಬಸವೇಶ್ವರ ಜಯಂತ್ಯೋತ್ಸವದ ಅಂಗವಾಗಿ ಇಂದು ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಭಕ್ತಾದಿಗಳು ಆಗಮಿಸಿ ಪ್ರಸಾದ ಸ್ವೀಕರಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗಲು ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘ ತಿಳಿಸಿದೆ.

## ಸನ್ಮಾರ್ಗದಲ್ಲಿ ನಡೆಯಲು ಕ್ರೀಡೆಯೂ ಸಹಕಾರಿ : ಹೆಬ್ಬಾಳು ರುದ್ರೇಶ್ವರ ಶ್ರೀ



ದಾವಣಗೆರೆ, ಮೇ 3- ಇಂದಿನ ಯುವಕರೇ ಮುಂದಿನ ದೇಶದ ಶಕ್ತಿ. ಯುವಕರು ಸತ್ಯಯುತ ಸನ್ಮಾರ್ಗದಲ್ಲಿ ನಡೆಯಲು ಕ್ರೀಡೆಯೂ ಸಹಕಾರಿ ಎಂದು ಹೆಬ್ಬಾಳು ಮಠದ ಶ್ರೀ ಮಹಾಂತ ರುದ್ರೇಶ್ವರ ಮಹಾಸ್ವಾಮಿಗಳು ಹೇಳಿದರು.

ಸುಕ್ಷೇತ್ರ ಹೆಬ್ಬಾಳು ಗ್ರಾಮದಲ್ಲಿ ನಡೆದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಯನ್ನು ಇಲ್ಲಿನ ಯುವಕ ಮಂಡಳಿಯವರು ನಿನ್ನೆ ಆಯೋಜಿಸಿದ್ದ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಇದೇ ವೇಳೆ ಮುಂದಿನ ವರ್ಷ ಮಹಿಳಾ ವಾಲಿಬಾಲ್ ಪಂದ್ಯಾವಳಿಯನ್ನು ಆಯೋಜಿಸುವಂತೆ ಸಂಘಕ್ಕೆ ಸಲಹೆ ನೀಡಿದರು. ಮುಖ್ಯ ಅತಿಥಿಗಳಾಗಿ ಡಾ. ಬಿ.ಟಿ. ಸಿದ್ದಪ್ಪ, ಜಿ.ಎಸ್. ಶ್ಯಾಮ್ ಇತರರಿದ್ದರು.

## ಬಸವೇಶ್ವರ ಮಹಾದ್ವಾರ ಲೋಕಾರ್ಪಣೆ



ದಾವಣಗೆರೆ, ಮೇ 3- ನಗರದ ಕಾಯಿಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮಹಾದ್ವಾರವನ್ನು ಶಾಸಕರೂ, ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆದ ಡಾ|| ಶಾಮನೂರು ಶಿವಶಂಕರಪ್ಪ ಮಂಗಳವಾರ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ಇಂದಿನ ವಿಶ್ವ ಪರಿಸ್ಥಿತಿಯಲ್ಲಿ ಶಾಂತಿ ಸಹಬಾಳ್ವೆ ನಡೆಸಲು ಬಸವ ತತ್ವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಬಸವಣ್ಣನವರ ತತ್ವಗಳು ಇಡೀ ವಿಶ್ವಕ್ಕೇ ಮಾರ್ಗದರ್ಶಿಯಾಗಿದ್ದು, ಕೇವಲ ನಾವು ವರ್ಷಕ್ಕೊಮ್ಮೆ ಜಯಂತಿ ಆಚರಿಸಿ ಪೂಜೆ ಸಲ್ಲಿಸಿದರೆ ಸಾಲದು. ಬಸವ ತತ್ವವನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು. ನಂತರ ಕಾಯಿಪೇಟೆಯಲ್ಲಿರುವ ಬಸವ ದೇವರಿಗೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಸೋಗಿ ಶಾಂತಕುಮಾರ್, ಪಾಲಿಕೆ ಮಾಜಿ ಸದಸ್ಯ ಪಿ.ಎನ್.ಚಂದ್ರಶೇಖರ್, ಸಾವನ್ ಜೈನ್, ದೇವಸ್ಥಾನ ಸಮಿತಿ ಅಧ್ಯಕ್ಷ ಅಂದನೂರು ಮುರುಗೇಶಪ್ಪ, ಬಾದಾಮಿ ಪ್ರಭು, ಎಂ. ಕೆ.ಬಸವರಾಜ್, ಪಂಚಾಕ್ಷರಿ, ಮತ್ತಿಹಳ್ಳಿ ಶಿವಕುಮಾರ್, ಶಿವಯೋಗಿ ಗರಗ್, ಗೋಪಾಲಶೆಟ್ರು, ಹೋಟೆಲ್ ಕಾಶಿನಾಥ್ ಮತ್ತು ಇತರರು ಉಪಸ್ಥಿತರಿದ್ದರು.

## ಏಪ್ರಿಲ್‌ನಲ್ಲಿ ರಫ್ತು ಶೇ.24.22 ಹೆಚ್ಚಳ

ನವದೆಹಲಿ, ಮೇ 3 – ಪೆಟ್ರೋಲಿಯಂ, ಎಲೆಕ್ಟ್ರಾನಿಕ್ ಸರಕು ಹಾಗೂ ರಾಸಾಯನಿಕ ವಲಯದಲ್ಲಿ ಉತ್ತಮ ಸಾಧನೆಯಿಂದಾಗಿ ಏಪ್ರಿಲ್ ತಿಂಗಳಲ್ಲಿ ರಫ್ತು ಪ್ರಮಾಣ ಶೇ.24.22ರಷ್ಟು ಹೆಚ್ಚಾಗಿ 38.19 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಇದೇ ತಿಂಗಳಲ್ಲಿ ಆಮದು ಸಹ ಹೆಚ್ಚಾಗಿ ವಿನಿಮಯ ಕೊರತೆ 20 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಆಮದು ಶೇ.26.55ರಷ್ಟು ಹೆಚ್ಚಾಗಿ 58.26 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಏಪ್ರಿಲ್ 2021ರಲ್ಲಿ ವಿನಿಮಯ ಕೊರತೆ 15.29 ಶತಕೋಟಿ ಡಾಲರ್ ಆಗಿತ್ತು.

ಈ ತಿಂಗಳಲ್ಲಿ ಆಮದು ಪ್ರಮಾಣ ಶೇ.81.21ರಷ್ಟು ಹೆಚ್ಚಾಗಿ 19.5 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಕಲ್ಲಿದ್ದಲು ಆಮದು ಸಹ ಹೆಚ್ಚಾಗಿದೆ. ಆದರೆ, ಬಂಗಾರದ ಆಮದು 1.68 ಶತಕೋಟಿ ಡಾಲರ್‌ಗಳಿಗೆ ಇಳಿಕೆಯಾಗಿದೆ. ಇಂಜಿನಿಯರಿಂಗ್ ಸರಕುಗಳ ರಫ್ತು ಪ್ರಮಾಣ ಶೇ.15.38ರಷ್ಟು 9.2 ಶತಕೋಟಿ ಡಾಲರ್‌ಗಳಿಗೆ ತಲುಪಿದೆ.

## ನ್ಯಾಮತಿ : ಸಂಭ್ರಮದ ಬಸವ ಜಯಂತಿ



ನ್ಯಾಮತಿ, ಮೇ 3- ಪಟ್ಟಣದಲ್ಲಿ ಮಂಗಳವಾರ ತಾಲ್ಲೂಕು ಆಡಳಿತ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು, ಪೇಟೆ ಬಸವೇಶ್ವರ ದೇವಾಲಯ ಟ್ರಸ್ಟ್, ಕದಳಿ, ಬಸವ, ಅಕ್ಕನ ಬಳಗ ಸಂಘಟನೆಗಳು ಜಂಟಿಯಾಗಿ ಆಯೋಜಿಸಿದ್ದ ಬಸವೇಶ್ವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಬಸವೇಶ್ವರ ಭಾವಚಿತ್ರ ಇರುವ ಟ್ರ್ಯಾಕ್ಟರನ್ನು ಚಲಾಯಿಸುವ ಮೂಲಕ ಕಾರ್ಯಕ್ರಮಕ್ಕೆ ಶಾಸಕ ರೇಣುಕಾಚಾರ್ಯ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಎಂ.ರೇಣುಕ, ಉಪತಹಶೀಲ್ದಾರ್ ನ್ಯಾಮತಿ ನಾಗರಾಜಪ್ಪ, ಕನ್ನಡ ಸಾಹಿತ್ಯ ಪರಿಷತ್ತ್ ಅಧ್ಯಕ್ಷ ಡಿ.ಎಂ. ಹಾಲಾರಾಧ್ಯ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಬಿ.ಶಿವಯೋಗಿ, ಪೇಟೆ ಬಸವೇಶ್ವರ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಸಂತೋಷಕುಮಾರ ಇದ್ದರು.

**ಮಲ್ಲಿಗೇನಹಳ್ಳಿ ಗ್ರಾಮದಲ್ಲಿ ಎತ್ತುಗಳ ಅಲಂಕಾರ :** ಬಸವ ಜಯಂತಿ ಹಿನ್ನೆಲೆಯಲ್ಲಿ ಮಲ್ಲಿಗೇನಹಳ್ಳಿ ಗ್ರಾಮದಲ್ಲಿ ರೈತರು ಬಸವಣ್ಣನವರ ಭಾವಚಿತ್ರ ಎತ್ತಿನಗಾಡಿಯಲ್ಲಿಟ್ಟು ಗ್ರಾಮದ ತುಂಬೆಲ್ಲಾ ಮೆರವಣಿಗೆ ಮಾಡಿದರು.

**ಸಾರ್ವಜನಿಕ ಸಭೆ:** ನ್ಯಾಮತಿ ಪಟ್ಟಣದಲ್ಲಿ ನಡೆಯುತ್ತಿರುವ ರಸ್ತೆ ಅಭಿವೃದ್ದಿ ಕಾಮಗಾರಿ ವಿಳಂಬ ಮಾಡುತ್ತಿರುವ ಬಗ್ಗೆ ಚರ್ಚಿಸಲು ಮೇ 4ರಂದು ಮಧ್ಯಾಹ್ನ 12 ಗಂಟೆಗೆ ಸಾರ್ವಜನಿಕರ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು.

**ಇಂಡೋನೇಷಿಯಾ ರಫ್ತಿಗೆ ತಡೆ**

## ಅಡುಗೆ ಎಣ್ಣೆ ಬೆಲೆ ಏರಿಕೆಯ ಬಿಸಿ



ನವದೆಹಲಿ, ಮೇ 3 - ಕಚ್ಚಾ ತೈಲದ ಕಾರಣದಿಂದಾಗಿ ಬೆಲೆ ಏರಿಕೆಯ ಬೆಂಕಿ ಹತ್ತಿಕೊಂಡಿದ್ದರೆ, ಆ ಬೆಂಕಿಗೆ ಈಗ ಅಡುಗೆ ಎಣ್ಣೆ ಸುರಿದಂತಾಗಿದೆ. ಇಂಡೋನೇಷಿಯಾದಿಂದ ತಾಳೆ ಎಣ್ಣೆ ರಫ್ತು ನಿಲ್ಲಿಸಿರುವುದರಿಂದ ಆಮದು ದೇಶವಾಗಿರುವ ಭಾರತದಲ್ಲಿ ಬೆಲೆ ಏರಿಕೆಯ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ.

ಪ್ರತಿ ತಿಂಗಳು ಭಾರತ 7 ಲಕ್ಷ ಟನ್‌ಗಳಷ್ಟು ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿದ್ದು, ಇದರಲ್ಲಿ ಅರ್ಧದಷ್ಟು ಇಂಡೋನೇಷಿಯಾದಿಂದ ಬರುತ್ತದೆ. ಇಂಡೋನೇಷಿಯಾದಲ್ಲಿ ತೈಲ ಬೆಲೆ ಏರಿಕೆಯಾಗಿರುವುದರಿಂದ ರಫ್ತು ನಿಲ್ಲಿಸಲಾಗಿದೆ.

ಉಕ್ರೇನ್ ಯುದ್ಧ ಆರಂಭದ ನಂತರದಿಂದಲೂ ಎಣ್ಣೆ ಬೆಲೆ ಏರುತ್ತಿತ್ತು. ಈಗಂತೂ ವಾರದಲ್ಲೇ ಅಡುಗೆ ಎಣ್ಣೆ ಬೆಲೆ ಶೇ.10ರಷ್ಟು ಹೆಚ್ಚಾಗಿದೆ.

ಖಾದ್ಯ ತೈಲವನ್ನು ಅಡುಗೆಗಷ್ಟೇ ಅಲ್ಲದೇ ಕೇಕು, ಸೋಪು, ಅಲಂಕಾರಿಕ ವಸ್ತುಗಳು ಹಾಗೂ ಶುಭ್ರಗೊಳಿಸುವ ಸಾಮಗ್ರಿಗಳ ಉತ್ಪಾದನೆ ಸೇರಿದಂತೆ ಕೈಗಾರಿಕಾ ಉತ್ಪನ್ನಗಳಿಗೆ ಬಳಸಲಾಗುತ್ತದೆ. ಹೀಗಾಗಿ ಇವುಗಳ ಬೆಲೆಗಳ ಮೇಲೂ ಒತ್ತಡ ಬಿದ್ದಿದೆ. ಕೆಲ ಸೋಪುಗಳ ಬೆಲೆಗಳನ್ನು ಈಗಾಗಲೇ ಏರಿಕೆ ಮಾಡಲಾಗಿದೆ. ತಾಳೆಎಣ್ಣೆ ಪೂರೈಕೆ ಕುಂಠಿತವಾಗಿರುವುದರಿಂದ, ಇತರೆ ಅಡುಗೆ ಎಣ್ಣೆಗಳ ಬೆಲೆಗಳೂ ಏರಿಕೆಯಾಗುತ್ತಿವೆ.

ಅಡುಗೆ ಎಣ್ಣೆ ಪೂರೈಕೆ ಸುಗಮಗೊಳಿಸಲು ಕ್ರಮ ತೆಗೆದುಕೊಳ್ಳುವುದಾಗಿ ಕೇಂದ್ರ ಆಹಾರ ಸಚಿವಾಲಯ ತಿಳಿಸಿದೆ. ಪ್ರಸಕ್ತ ದೇಶದಲ್ಲಿ 21 ಲಕ್ಷ ಮೆಟ್ರಿಕ್ ಟನ್ ಎಣ್ಣೆ ದಾಸ್ತಾನಿದೆ. 12 ಲಕ್ಷ ಮೆಟ್ರಿಕ್ ಟನ್ ತೈಲ ಮೇ ತಿಂಗಳಲ್ಲಿ ಬರಲಿದೆ. ಇದರಿಂದ ಪರಿಸ್ಥಿತಿ ಸರಿದೂಗಿಸಬಹುದು ಎಂದು ಇಲಾಖೆ ಅಂದಾಜಿಸಿದೆ.

ಇಂಡೋನೇಷಿಯಾದಿಂದ ಎಣ್ಣೆ ಪೂರೈಕೆ ನಿಲ್ಲಿಸಿರುವ ಕಾರಣ, ಮಲೇಷಿಯಾದಿಂದ ಆಮದು ಮಾಡಿಕೊಳ್ಳುವ ಪ್ರಯತ್ನ ನಡೆದಿದೆ. ಆದರೆ, ಮಲೇಷಿಯ ಪ್ರತಿ ವರ್ಷ 19 ದಶಲಕ್ಷ ಟನ್ ತಾಳೆ ಎಣ್ಣೆ ರಫ್ತು ಮಾಡುತ್ತದೆ. ಹೆಚ್ಚುವರಿ ಬೇಡಿಕೆ ಸಂಪೂರ್ಣ ನಿಭಾಯಿಸಲು ಆ ದೇಶಕ್ಕೆ ಸಾಧ್ಯವಾಗದು ಎನ್ನಲಾಗಿದೆ.


ಇಷ್ಟಾದರೂ, ಇಂಡೋನೇಷಿಯಾದ ಖಾದ್ಯ ತೈಲ ರಫ್ತು ಸಮಸ್ಯೆ ತಾತ್ಕಾಲಿಕ ಎಂದು ವಿಶ್ಲೇಷಿಸಲಾಗುತ್ತಿದೆ. ಏಕೆಂದರೆ ಇಂಡೋನೇಷಿಯ ಪ್ರತಿ ತಿಂಗಳು 2.5 ದಶಲಕ್ಷ ಟನ್ ತಾಳೆಎಣ್ಣೆ ರಫ್ತು ಮಾಡುತ್ತದೆ. ಮೇ ತಿಂಗಳ ಅಂತ್ಯಕ್ಕೆ ದೇಶ 6.5 ದಶಲಕ್ಷ ಟನ್‌ಗಳ ಎಣ್ಣೆ ಸಂಗ್ರಹ ಹೊಂದಲಿದೆ. ದೇಶದ ಬಳಕೆ ಪ್ರಮಾಣ 1.5 ದಶಲಕ್ಷ ಟನ್ ಮಾತ್ರವಾಗಿದೆ. ಹೀಗಾಗಿ ಹೆಚ್ಚುವರಿ ದಾಸ್ತಾನು ಇಟ್ಟುಕೊಳ್ಳಲು ಆ ದೇಶದ ಬಳಿ ವ್ಯವಸ್ಥೆ ಇಲ್ಲ ಎನ್ನಲಾಗಿದೆ.

ಇಂಡೋನೇಷಿಯಾದ ಸಮಸ್ಯೆ ಬಗೆಹರಿದರೂ ಸಹ, ಉಕ್ರೇನ್ ಸಮರದ ಸಮಸ್ಯೆ ಸದ್ಯಕ್ಕೆ ಬಗೆಹರಿಯುವ ಸೂಚನೆ ಕಾಣುತ್ತಿಲ್ಲ. ಆ ದೇಶದಿಂದ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಬರುತ್ತಿದ್ದ ತೈಲ ಪೂರೈಕೆ ನಿಂತಿದೆ. ಹೀಗಾಗಿ ಸದ್ಯಕ್ಕೆ ಅಡುಗೆ ಎಣ್ಣೆಯ ಬೆಲೆ ಸಾಮಾನ್ಯ ಮಟ್ಟಕ್ಕೆ ಇಳಿಯುವ ಸಾಧ್ಯತೆಯಂತೂ ಕಾಣುತ್ತಿಲ್ಲ.

## ಜೀವಂತ ಪ್ರಮಾಣಪತ್ರ ಸಲ್ಲಿಕೆ

ದಾವಣಗೆರೆ, ಮೇ 3 - ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾಸಾಶನ/ವಿಧವಾ ಮಾಸಾಶನ ಪಡೆಯುತ್ತಿರುವ ಕಲಾವಿದರು ಜೀವಂತ ಪ್ರಮಾಣ ಪತ್ರವನ್ನು ಇಲಾಖೆಗೆ ಇದೇ ದಿನಾಂಕ 15ರೊಳಗಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ ಭವನ, ಮೊದಲನೇ ಮಹಡಿ, ಕೊಠಡಿ ಸಂಖ್ಯೆ:27, ಪಿ.ಬಿ. ರಸ್ತೆ ದಾವಣಗೆರೆ ದೂರವಾಣಿ 08192-234849 ಕ್ಕೆ ಸಂಪರ್ಕಿಸಬಹುದೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte